24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 120 | ನವದೆಹಲಿ | ಬೆಲೆ ₹10 | ಅಕ್ಟೋಬರ್ 26, 2026 ಸೋಮವಾರ

ಸರ್ಕಾರದ ನಡೆ.. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯ ಕಡೆ...

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್** ರವರು
ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾದ
ಶ್ರೀ ಬಿ. ರಘುಮೂರ್ತಿ ರವರನ್ನು ಅಭಿನಂದಿಸುತ್ತಿರುವುದು

2023-24ನೇ ಆರ್ಥಿಕ ವರ್ಷದಿಂದ ಇಲ್ಲಿಯವರೆಗೆ

ಪರಿಶಿಷ್ಟ ಪಂಗಡ ಸಮುದಾಯದವರ ಕಲ್ಯಾಣಕ್ಕಾಗಿ ಟಿ.ಎಸ್.ಪಿ ಯೋಜನೆಯಡಿ ಅಭಿವೃದ್ಧಿ ಇಲಾಖೆಗಳಿಗೆ ರೂ.46,306 ಕೋಟಿ ಅನುದಾನ ಹಂಚಿಕೆ

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ನಿಗಮಗಳಿಗೆ ರೂ. 8,802 ಕೋಟಿ ಅನುದಾನ ಹಂಚಿಕೆ.

ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು

- 15.85 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು ರೂ.849 ಕೋಟಿ ವಿದ್ಯಾರ್ಥಿ ವೇತನ
- 1.44 ಲಕ್ಷ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಒಟ್ಟು ರೂ.252 ಕೋಟಿ ಪ್ರೋತ್ಸಾಹ ಧನ
- 590 ಸಂಸ್ಥೆಗಳ ಮೂಲಕ 93,282 ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ
- ಡಾ. ಬಿ.ಆರ್. ಅಂಬೇಡ್ಕರ್ ಅಂತರರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ವಿದೇಶಿ ವಿ.ವಿ.ಗಳಲ್ಲಿ ಅಧ್ಯಯನ ಮಾಡಲು-162 ವಿದ್ಯಾರ್ಥಿಗಳಿಗೆ ರೂ.71.62 ಕೋಟಿ ಸಹಾಯಧನ
- 84 ಹೊಸ ವಿದ್ಯಾರ್ಥಿ ನಿಲಯಗಳ ಸ್ಥಾಪನೆ

ಇಲಾಖೆಯ ಇತರೆ ಪ್ರಮುಖ ಕಾರ್ಯಕ್ರಮಗಳು

- ಪ್ರತ್ಯೇಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಸ್ಥಾಪನೆ.
- 14 ಬುಡಕಟ್ಟು ಸಮುದಾಯಗಳ 52,678 ಕುಟುಂಬಳಿಗೆ ಪೌಷ್ಟಿಕ ಆಹಾರ ಪದಾರ್ಥಗಳ ಪೂರೈಕೆಗೆ ರೂ. 422.48 ಕೋಟಿ ವಿನಿಯೋಗ.
- ಮುಖ್ಯಮಂತ್ರಿ ಅದಿವಾಸಿ ಗೃಹಭಾಗ್ಯ ಯೋಜನೆಯಡಿ 9 ಜಿಲ್ಲೆಗಳಲ್ಲಿ ಅರಣ್ಯ ಹಾಗೂ ಅರಣ್ಯದಂಚಿನಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಸಮುದಾಯದ 6,856 ವಸತಿ ರಹಿತ ಕುಟುಂಬಗಳಿಗೆ ರೂ.4.50 ಲಕ್ಷಗಳ ಘಟಕ ವೆಚ್ಚದಲ್ಲಿ ಒಟ್ಟು ರೂ.308.52 ಕೋಟಿ ವೆಚ್ಚದಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.
- ಕಾಲೋನಿ/ಹಾಡಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ರೂ.318.17 ಕೋಟಿ ಹಂಚಿಕೆ.
- ವಾಲ್ಮೀಕಿ ಭವನ/ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ರೂ.125 ಕೋಟಿ ಹಂಚಿಕೆ
- ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಟ್ರೈಬಲ್ ಹೆಲ್ತ್ ನ್ಯಾವಿಗೇಟರ್ ಕಾರ್ಯಕ್ರಮ ಜಾರಿ.
- ಪರಿಶಿಷ್ಟ ಪಂಗಡದ 386 ಉದ್ಯಮಿಗಳಿಗೆ ರೂ.71 ಕೋಟಿ ಬಡ್ಡಿ ಸಹಾಯಧನ.
- SCSP/TSP ಅಧಿನಿಯಮ 2013ರ ಸೆಕ್ಷನ್ 7(ಡಿ) ಅನ್ನು ಕೈಬಿಡಲಾಗಿದೆ

ವಿವಿಧ ನಿಗಮಗಳ ಮೂಲಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ

- ಗಂಗಾ ಕಲ್ಯಾಣ ಯೋಜನೆಯಡಿ 5,355 ಫಲಾನುಭವಿಗಳಿಗೆ ಕೊಳವೆಬಾವಿ ಸೌಲಭ್ಯ.
- ಸ್ವಯಂ ಉದ್ಯೋಗ ಯೋಜನೆಯಡಿ 6,734 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಮಹಿಳಾ ಸ್ವಸಹಾಯ ಸಂಘಗಳ 6,510 ಸದಸ್ಯರಿಗೆ ಕಿರುಸಾಲ ಸೌಲಭ್ಯ.

2026-27ನೇ ಸಾಲಿನ ಪ್ರಮುಖ ಆಯವ್ಯಯ ಘೋಷಣೆಗಳು

- ರೂ.50.00 ಕೋಟಿಗಳ ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ಸಂಕೀರ್ಣ ನಿರ್ಮಾಣ
- ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪನೆ
- ಪರಿಶಿಷ್ಟ ಪಂಗಡಗಳ ಆಯೋಗ ಸ್ಥಾಪನೆ
- 50 ವಿದ್ಯಾರ್ಥಿ ನಿಲಯಗಳು ಮತ್ತು 8 ವಸತಿ ಶಾಲೆಗಳ ಮಂಜೂರು
- ಫಾಸ್ಟ್ ಫುಡ್ ಟ್ರಕ್ /ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ (Kiosk) ಸ್ಥಾಪನೆಗೆ ಶೇ.70 ರಷ್ಟು ಸಹಾಯಧನ.
- ಮಹರ್ಷಿ ವಾಲ್ಮೀಕಿ ಅದಿವಾಸಿ ಬುಡಕಟ್ಟು ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಆರೈಕೆಗಾಗಿ 119 ಮಹಿಳಾ ಕೇರ್ ಟೇಕರ್ ಹುದ್ದೆಗಳ ಮಂಜೂರು

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

2023-24ನೇ ಆರ್ಥಿಕ ವರ್ಷದಿಂದ ಇಲ್ಲಿಯವರೆಗೆ ರೂ. 525.75 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಗಾಗಿ ರೂ. 364.18 ಕೋಟಿಗಳ ವಿನಿಯೋಗ, ಒಟ್ಟು 16,248 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಕಾರ್ಯಕ್ರಮ	ಅನುದಾನ ಹಂಚಿಕೆ	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
ಗಂಗಾ ಕಲ್ಯಾಣ	179.10	171.35	4980
ಭೂ ಒಡೆತನ	80.00	63.85	544
ಸ್ವಯಂ ಉದ್ಯೋಗ	98.42	54.07	3164
ಸ್ವಾವಲಂಭಿ ಸಾರಥಿ	73.48	66.00	1650
ಪ್ರೇರಣ ಮೈಕ್ರೋ ಕ್ರೆಡಿಟ್	65.87	8.91	5910

2026-27ನೇ ಸಾಲಿನಲ್ಲಿ ರೂ. 211.12 ಕೋಟಿ ಹಂಚಿಕೆಯಾಗಿದ್ದು, ಫಲಾಪೇಕ್ಷಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ

ನಿತ್ಯ ಪಂಚಾಂಗ 26.10.2026 ಸೋಮವಾರ

ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ವಾಲ್ಮೀಕಿ ಜಯಂತಿ, ಶೀಗಿ ಹುಣ್ಣಿಮೆ, ಕಾರ್ತಿಕ ಸ್ನಾನಾರಂಭ, ಶೃಂಗೇರಿ ತೆಪ್ಪೋತ್ಸವ

ದಿನ	ರಾಹುಕಾಲ	ಯಮಗಂಡ	ಗುಳಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮ. 3.25– 4.59	9.00–10.30	12.00– 1.30
ಬುಧ	ಮ.12.16– 1.50	7.30– 9.00	10.30– 12.00
ಗುರು	ಮ. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

ಕೆಪಿಎಸ್‌ಸಿಗೆ ಹೊಸರೂಪ: ಸಿಎಂ ಡಿ.ಕೆ.ಶಿವಕುಮಾರ್ ಆಶಯ

ಬೆಂಗಳೂರು, ಅ.25: ಕೆಪಿಎಸ್‌ಸಿಗೆ ಹೊಸರೂಪ ನೀಡಲು ಸರ್ಕಾರ ಮುಂದಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿ, ಕೆಪಿಎಸ್‌ಸಿ ಅಕ್ರಮದ ಬಗ್ಗೆ ಕೆಲವು ವಿಚಾರಗಳು ಗಮನಕ್ಕೆ ಬಂದಿದ್ದು, ಇ.ಡಿ. ಹಾಗೂ ನಮ್ಮ ಅಧಿಕಾರಿಗಳು ತನಿಖೆ ಮಾಡಿದ್ದು, ಸತ್ಯಾಂಶ ಹೊರತರಲು ಕೂಡಲೇ ವಿಚಾರಣೆಗೆ ಅನುಮತಿ ನೀಡಲಾಗಿದೆ. ಮಕ್ಕಳು ಕಷ್ಟಪಟ್ಟು ಓದಿರುತ್ತಾರೆ. ಈ ರೀತಿ ದುಡ್ಡು, ಶಿಫಾರಸ್ಸಿಗೆ ಅವಕಾಶ ನೀಡುವುದು ಸರಿಯಲ್ಲ. ಈ ಹಿಂದೆಯೂ ಕೆಪಿಎಸ್‌ಸಿಯಲ್ಲಿ ಅನೇಕ ಅವಾಂತರಗಳನ್ನು ನೋಡಿದ್ದೇವೆ. ಇದರ ನಿವಾರಣೆಗೆ ಸಮಿತಿ ರಚಿಸಿದ್ದು, ಅಭಿಪ್ರಾಯ ಪಡೆಯಲಾಗುವುದು. ಕೆಪಿಎಸ್‌ಸಿಗೆ ಹೊಸರೂಪ ನೀಡಬೇಕಿದೆ. ನಮ್ಮ ರಾಷ್ಟ್ರೀಯ ನಾಯಕರು ಶಿಕ್ಷಣ ವ್ಯವಸ್ಥೆ ಸುಧಾರಣೆ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಸಚಿವ ಯು.ಟಿ. ಖಾದರ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ನಾನು ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರು ಪರಿಶುದ್ಧ ಪರೀಕ್ಷಾ ವ್ಯವಸ್ಥೆಗೆ ಆಲೋಚನೆ ಮಾಡಿದ್ದು, ಇದಕ್ಕೆ ಸೂಕ್ತ ಮಾರ್ಗದರ್ಶನ ನೀಡಿದ್ದೇವೆ ಎಂದರು.

ಕಬ್ಬು ಬೆಳೆಗಾರರ ಜೊತೆ ಚರ್ಚೆ: ಸೋಮವಾರ ಬೆಳಗಾವಿಯಲ್ಲಿ ಏರ್ಪಡಿಸಿರುವ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಜತೆ ಸಭೆ ಬಗ್ಗೆ ಕೇಳಿದಾಗ, "ಮೊದಲು ರೈತರ ಜೊತೆ ಚರ್ಚೆ ಮಾಡಿ ನಂತರ ಸಕ್ಕರೆ ಕಾರ್ಖಾನೆ ಮಾಲೀಕರ ಜತೆ ಚರ್ಚೆ ಮಾಡುವೆ. ಕೇಂದ್ರ ಸಚಿವರು ಬೇರೆ ಕೆಲಸದ ನಿಮಿತ್ತ ಭಾಗವಹಿಸುತ್ತಿಲ್ಲ. ಎಲ್ಲಾ ರಾಜ್ಯಗಳಲ್ಲಿ ಈ ವಿಚಾರವಾಗಿ ಚರ್ಚೆ ನಡೆಯುತ್ತಿದೆ. ರೈತರು ಆದಷ್ಟು ಬೇಗ ಕಬ್ಬು ಅರೆಯಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ನಾನು ಸಂಸದರು, ಸಚಿವರು ಹಾಗೂ ಶಾಸಕರಿಗೆ ಸಭೆಯಲ್ಲಿ ಭಾಗವಹಿಸಲು ತಿಳಿಸಿದ್ದೇನೆ. ನಾವೆಲ್ಲರೂ ಚರ್ಚೆ ಮಾಡುತ್ತೇವೆ" ಎಂದರು.

ಆರ್‌ಎಸ್‌ಎಸ್‌ನ ಹಣದ ಮೂಲ, ಖರ್ಚಿನ ವಿವರ ಸಾರ್ವಜನಿಕವಾಗಿ ಮುಂಡಿಸಿ: ಸಚಿವ ಖರ್ಗೆ ಆಗ್ರಹ

ಬೆಂಗಳೂರು, ಅ.25: ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೋಂದಣಿ ಆಗದಿರುವ ವಿಚಾರವನ್ನು ಮತ್ತೆ ಪ್ರಸ್ತಾಪಿಸಿರುವ ಗೃಹ ಸಚಿವ ಪ್ರಿಯಾಂಕ ಖರ್ಗೆ, ಆರ್‌ಎಸ್‌ಎಸ್ ಎಲ್ಲಕ್ಕಿಂತ ಹೆಚ್ಚಾಗಿ ನೋಂದಾಯಿತ ಎಂಬ ಚಿಹ್ನೆಗೆ ಭಯಪಡುತ್ತದೆ ಎಂದು ಕುಟುಕಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ ಅವರು ನೋಂದಣಿಗೆ ಆರ್‌ಎಸ್‌ಎಸ್ ಭಯಪಡುತ್ತದೆ ಏಕೆಂದರೆ, ಅಧಿಕೃತ ನೋಂದಣಿಯಾದರೆ ಕಾನೂನು ಪರಿಶೀಲನೆ, ಹಣಕಾಸಿನ ವಿವರಗಳ ಬಹಿರಂಗಪಡಿಸುವಿಕೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಅನಿವಾರ್ಯವಾಗುತ್ತವೆ ಎಂದವರು ವ್ಯಂಗ್ಯವಾಡಿದ್ದಾರೆ.

ಆರ್‌ಎಸ್‌ಎಸ್‌ಗೆ ಹಣ ಎಲ್ಲಿಂದ ಬರುತ್ತದೆ ಯಾವುದಕ್ಕೆ ಖರ್ಚು ಮಾಡುತ್ತದೆ ಯಾರು ಆಡಿಟ್ ಮಾಡುತ್ತಾರೆ ಎಲ್ಲವೂ ಗೊತ್ತಾಗಬೇಕೀದೆ. ಹಾಗಾಗಿ ಆರ್‌ಎಸ್‌ಎಸ್ ತನ್ನ ಹಣದ ಮೂಲ, ಖರ್ಚು ಎಲ್ಲವನ್ನು ಸಾರ್ವಜನಿಕವಾಗಿ ಮುಂದಿಡಬೇಕು ಎಂದು ಒತ್ತಾಯಿಸಿದ್ದಾರೆ. ಸದಾ ಒಂದಿಲ್ಲ ಒಂದು ವಿಚಾರವನ್ನು ಮುಂದಿಟ್ಟುಕೊಂಡು ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಗೃಹ ಸಚಿವರು ಎರಡು ದಿನಗಳ ಹಿಂದೆ ಇಷ್ಟೇ ಎರಡು ಮೂರು ದಿನಗಳ ಹಿಂದೆ ಎಷ್ಟೇ ಆರ್ ಎಸ್ ಎಸ್ ಪಥಸಂಚಲನಕ್ಕೆ ಅನುಮತಿ ಪಡೆಯಲೇಬೇಕು ಬರೀ ಮಾಹಿತಿ ನೀಡಿದರೆ ಸಾಲದು ಎಂದು ಹೇಳಿದ್ದರು ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿ ಬಿಜೆಪಿ ನಾಯಕರು ಪ್ರಿಯಾಂಕ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು.

ಕೇಂದ್ರದ ಅನುದಾನ ಬಳಕೆಯಲ್ಲೂ ಕಾಂಗ್ರೆಸ್ ವಿಫಲ: ರವಿಕುಮಾರ್

ಬೆಂಗಳೂರು, ಅ.25: ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ವಿಫಲವಾಗಿರುವ ಕಾಂಗ್ರೆಸ್ ಸರ್ಕಾರ ಸಂಪೂರ್ಣ ಅಸಮರ್ಥವಾಗಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಟೀಕಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ರಾಜ್ಯದ 12 ಪ್ರಮುಖ ಇಲಾಖೆಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ 8,937 ಕೋಟಿ ರೂ. ಅನುದಾನವನ್ನು ಬಳಸಿಕೊಂಡಿಲ್ಲ. ಅನುದಾನ ಬಳಕೆಯಲ್ಲಿ ಕೇವಲ ಶೇ. 41.8ರಷ್ಟಿದೆ. ಇದು ರಾಜ್ಯದ ಆಡಳಿತದ ದಯನೀಯ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದ್ದಾರೆ. ವಿವಿಧ ಇಲಾಖೆಗಳ ಅನುದಾನ ಬಳಕೆಯ ವಿವರಗಳನ್ನು ಉಲ್ಲೇಖಿಸಿದ ರವಿಕುಮಾರ್, ಸಾರಿಗೆ ಇಲಾಖೆಗೆ 11 ಕೋಟಿ ಬಿಡುಗಡೆಯಾಗಿದ್ದರೂ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಕಂದಾಯ ಇಲಾಖೆಗೆ ಬಿಡುಗಡೆಯಾದ 189 ಕೋಟಿ ಅನುದಾನವೂ ಬಳಕೆಯಾಗಿಲ್ಲ. ಜಲಸಂಪನ್ಮೂಲ ಇಲಾಖೆಯಲ್ಲಿ ಅನುದಾನ ಬಳಕೆಯ ಪ್ರಮಾಣ ಕೇವಲ ಶೇ. 1.3ರಷ್ಟಿದ್ದು, 52 ಕೋಟಿ ಬಳಕೆಯಾಗದೆ ಉಳಿದಿದೆ. ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಅನುದಾನ ಬಳಕೆಯ ಪ್ರಮಾಣ ಕೇವಲ ಶೇ. 1.8ರಷ್ಟಿದ್ದು, 912 ಕೋಟಿ ಇನ್ನೂ ಬಳಕೆಯಾಗಿಲ್ಲ, ಬಳಕೆಯಾಗದೆ ಉಳಿದಿರುವ 8,937 ಕೋಟಿ ಅನುದಾನದಲ್ಲಿ ಜಲ ಜೀವನ್ ಮಿಷನ್, ಪಿ.ಬಿ.–ಜಿ–ರಾಮ್–ಜಿ ಸೇರಿದಂತೆ ಹತ್ತು ಪ್ರಮುಖ ಯೋಜನೆಗಳಿಗೆ ಸಂಬಂಧಿಸಿದ ಅನುದಾನದ ದೊಡ್ಡ ಪಾಲು ಸೇರಿದೆ. ಸಮಗ್ರ ಶಿಕ್ಷಣ ಯೋಜನೆಯೊಂದರಲ್ಲೇ 6,615 ಕೋಟಿ ಅನುದಾನ ಬಳಕೆಯಾಗದೆ ಉಳಿದಿದೆ ಎಂದು ರವಿಕುಮಾರ್ ವಿವರಿಸಿದ್ದಾರೆ.

ಈ ಅಂಕಿ–ಅಂಶಗಳು ರಾಜ್ಯದ ದೈನಂದಿನ ಆಡಳಿತ ಮತ್ತು ಜನಪರ ಯೋಜನೆಗಳ ಅನುಷ್ಠಾನದ ದುಸ್ಥಿತಿಯನ್ನು ಎತ್ತಿತೋರಿಸುತ್ತವೆ. ಮುಖ್ಯಮಂತ್ರಿಯಿಂದ ಹಿಡಿದು ಪ್ರತಿಯೊಬ್ಬ ಸಚಿವರವರೆಗೆ ಜನರ ಹಿತದೃಷ್ಟಿಯಿಂದ ಆಡಳಿತ ನಡೆಸುವಲ್ಲಿ ವಿಫಲರಾಗಿದ್ದಾರೆ. ಕೇಂದ್ರದ ಅನುದಾನವನ್ನು ಬಳಸಿಕೊಳ್ಳದಿರುವುದು ಜನರ ಹಿತಾಸಕ್ತಿಗೆ ದ್ರೋಹ ಬಗೆದಂತಾಗಿದೆ ಎಂದು ಅವರು ಟೀಕಿಸಿದ್ದಾರೆ. ಈ ಎಲ್ಲ ವಿಚಾರಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತಂದು, ರಾಜ್ಯ ಸರ್ಕಾರದಿಂದ ವಿವರಣೆ ಕೇಳುವಂತೆ ಒತ್ತಾಯಿಸುವುದಾಗಿ ಅವರು ತಿಳಿಸಿದ್ದಾರೆ.

ಚನ್ನಮ್ಮ ಫ್ರೀಡಂಪಾರ್ಕ್ ನಿರ್ಮಾಣಕ್ಕೆ ಬಜೆಟ್‌ನಲ್ಲಿ 40 ಕೋಟಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕಿತ್ತೂರು ರಾಣಿ ಚನ್ನಮ್ಮ ಹೆಸರು

ಕಿತ್ತೂರು (ಬೆಳಗಾವಿ), ಅ.25: ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಕಿತ್ತೂರು ರಾಣಿ ಚನ್ನಮ್ಮ ಸಾರಿಗೆ ಸಂಸ್ಥೆ ಎಂದು ಮರುನಾಮಕರಣ ಮಾಡಲಾಗುವುದು. ಚನ್ನಮ್ಮ ಫ್ರೀಡಂ ಪಾರ್ಕ್ ನಿರ್ಮಾಣಕ್ಕೆ ತಕ್ಷಣವೇ ಆದೇಶ ನೀಡಲಾಗುವುದು. ಶಾಸಕರ ಬೇಡಿಕೆ ಮೇರೆಗೆ ಮುಂದಿನ ಬಜೆಟ್ ನಲ್ಲಿ 40 ಕೋಟಿ ಅನುದಾನ ನೀಡಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಘೋಷಿಸಿದರು.

ಬೆಳಗಾವಿಯ ಕಿತ್ತೂರಿನಲ್ಲಿ ಭಾನುವಾರ ನಡೆದ ಕಿತ್ತೂರು ಉತ್ಸವದಲ್ಲಿ ಮಾತನಾಡಿ, "ಶಾಸಕ ಬಾಬಾಸಾಹೇಬ್ ಪಾಟೀಲ್ ಅವರು ಈ ಕೋಟೆಯಲ್ಲಿ ಇತಿಹಾಸದ ಪುಟ ಬರೆಯಬೇಕು, ಜನ ನನ್ನನ್ನು ಅಭಿಮಾನಪೂರ್ವಕವಾಗಿ ಆಯ್ಕೆ ಮಾಡಿದ್ದು ಸಾಕ್ಷಿಗುಡ್ಡೆ ಬಿಟ್ಟು ಹೋಗಬೇಕು ಎಂದು ಬಯಸಿದ್ದಾರೆ. ಮುಂದಿನ ಪೀಳಿಗೆಗೆ ಈ ಕೋಟೆಯನ್ನು ಪ್ರವಾಸಿ ಕೇಂದ್ರ ಆಗಲು ಮನವಿ ಮಾಡಿದರು. ದೇವರು ವರ, ಶಾಪ ನೀಡಲ್ಲ ಅವಕಾಶ ಮಾತ್ರ ನೀಡುತ್ತಾನೆ. ನಮಗೆ ಸಿಕ್ಕ ಸಂದರ್ಭದಲ್ಲಿ ಇಲ್ಲಿಗೆ ಬಂದಿರುವಾಗ ಏನಾದರೂ ಒಂದು ಕೊಡುಗೆ ನೀಡಬೇಕು. ಇತಿಹಾಸ ಉಳಿಸಲು, ನಮ್ಮ ಸರ್ಕಾರ ಇಂತಹ ಕಾರ್ಯಕ್ರಮ ರೂಪಿಸುತ್ತಿದ್ದೇವೆ" ಎಂದು ತಿಳಿಸಿದರು.

ಬೆಳಗಾವಿಯ ಕಿತ್ತೂರಿನಲ್ಲಿ ನಡೆದ ಕಿತ್ತೂರು ಉತ್ಸವ ಕಾರ್ಯಕ್ರಮದಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿದರು. ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಮಹಾಸ್ವಾಮಿ, ಶ್ರೀಗುರು ಮಡಿವಾಳೇಶ್ವರ ಮಠದ ಪಂಚಾಕ್ಷರಿ ಮಹಾಸ್ವಾಮಿ, ಕಾದರವಳ್ಳಿ ಸೀಮಿ ಮಠದ ಫಾಲಾಕ್ಷ ಶಿವಯೋಗಿಶ್ವರ ಸ್ವಾಮೀಜಿ, ಬೈಲೂರು ನಿಷ್ಕಲಮಂಟಪ ಮಠದ ನಿಜಗುಣಾನಂದ ಸ್ವಾಮೀಜಿ, ಸಚಿವರಾದ ರುದ್ರಪ್ಪ ಲಮಾಣಿ, ಎಸ್ ಎಸ್ ಮಲ್ಲಿಕಾರ್ಜುನ, ವಿಧಾನಸಭೆ ಆಡಳಿತ ಪಕ್ಷದ ಮುಖ್ಯಸಚೇತಕ ಅಶೋಕ್ ಪಟ್ಟಣ, ಶಾಸಕರಾದ ಬಾಬಾ ಸಾಹೇಬ್ ಪಾಟೀಲ್, ಲಕ್ಷ್ಮಿ ಹೆಬ್ಬಾಳ್ಕರ್, ಆಸೀಫ್ ರಾಜು ಸೇತ್, ಎನ್ ಎಚ್ ಕೋನರೆಡ್ಡಿ, ಮಹಾಂತೇಶ್ ಕೌಜಲಗಿ, ವಿಶ್ವಾಸ್ ವೈದ್ಯ, ಎಂಎಲ್ ಸಿ ಚನ್ನರಾಜ ಹಟ್ಟಿಹೊಳಿ ಮತ್ತಿತರರು ಉಪಸ್ಥಿತರಿದ್ದರು.

ಬದುಕಿಗೆ ಚನ್ನಭುಷವೇಂದ್ರ ಅವರ ಹೆಸರಲ್ಲಿ ಏತ ನೀರಾವರಿ ಯೋಜನೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ. 520 ಕೋಟಿ ರೂ. ಮೊತ್ತದ ಯೋಜನೆಗೆ ಸರ್ಕಾರ

ಕರ್ನಾಟಕದ ನೆಲ ಬಸವಣ್ಣ ಅವರ ಕಾಯಕ, ದಾಸೋಹದ ಸಮಾನತೆ ಸಂದೇಶ ಸಾರಿದೆ

"ಕರ್ನಾಟಕದ ನೆಲ ಬಸವಣ್ಣ ಅವರ ಕಾಯಕ, ದಾಸೋಹದ ಸಮಾನತೆ ಸಂದೇಶವನ್ನು ಜಗತ್ತಿಗೆ ಸಾರಿದೆ. ದ್ವೇಷದಿಂದ ಉತ್ತರ ಸಿಗಲ್ಲ, ಜನರನ್ನು ಪ್ರೀತಿಯಿಂದ ಕಂಡಾಗ ನಮಗೆ ಉತ್ತರ ನೀಡಲು ಸಾಧ್ಯ. ಈ ಸರ್ಕಾರ ನಿಮ್ಮ ಜತೆ ನಿಲ್ಲುತ್ತದೆ. ನಿಮಗಾಗಿ ಅನೇಕ ಕಾರ್ಯಕ್ರಮ ರೂಪಿಸಿದೆ. ನಮ್ಮ ಸರ್ಕಾರ ಅನೇಕ ಬದಲಾವಣೆ ತಂದಿದ್ದು, ನೀವು ಕೊಟ್ಟ ಅವಕಾಶದಲ್ಲಿ ಪ್ರಾಮಾಣಿಕ ಸೇವೆ ಮಾಡುತ್ತಿದ್ದೇವೆ" ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಿಂತನೆ ನಡೆಸಿದೆ" ಎಂದು ಭರವಸೆ ನೀಡಿದರು.

"ಈ ಕ್ಷೇತ್ರದಲ್ಲಿ 100 ಹಾಸಿಗೆಗಳ ಆಸ್ಪತ್ರೆ, 300 ಕೋಟಿ ಮೊತ್ತದ ಲೋಕೋಪಯೋಗಿ ಇಲಾಖೆ ಕಾಮಗಾರಿ ಸೇರಿದಂತೆ ಸುಮಾರು 1 ಸಾವಿರ ಕೋಟಿ ವೆಚ್ಚದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ" ಎಂದು ವಿವರಿಸಿದರು.

ವೀರ ರಾಣಿ ಚನ್ನಮ್ಮ ಸಾಹಸ ನಮ್ಮೆಲ್ಲರ ಸ್ಫೂರ್ತಿ: "ಕಿತ್ತೂರಿಗೆ ತನ್ನದೇ ಆದ ಇತಿಹಾಸವಿದೆ. ಚನ್ನಮ್ಮ ಕನ್ನಡದ ಮಣ್ಣಿಗಾಗಿ ಮಡಿದ ದಿಟ್ಟ ಹೋರಾಟಗಾರ್ತಿ. ಕಿತ್ತೂರಿನ ಕಥೆ ಚನ್ನಮ್ಮ ಅವರ ಇತಿಹಾಸ ಸಾರುತ್ತದೆ, ಸ್ವಾಭಿಮಾನದ ಮಹಿಮೆ. ರಾಣಿ ಚನ್ನಮ್ಮನ ಧೈರ್ಯ ಪ್ರತಿ ಪೀಳಿಗೆಗೆ ಸ್ವಾಭಿಮಾನದ ಪಾಠ. ಕಿತ್ತೂರು ಎಂದರೆ ವೀರರ ಸಂಕೇತ. ಕಿತ್ತೂರು ಉತ್ಸವ ನಾಡಿನ ಹೆಮ್ಮೆಯ ಸಂಕೇತ. ವೀರ ರಾಣಿ ಚನ್ನಮ್ಮ ಸಾಹಸ ನಮ್ಮೆಲ್ಲರ ಸ್ಫೂರ್ತಿ. ಚನ್ನಮ್ಮ ಅವರ ತ್ಯಾಗದ ನೆನಪು ಅಜರಾಮರ. ನಾಡಿನ ಸಂಸ್ಕೃತಿ. ಚನ್ನಮ್ಮ ಎಂಬುದು ಕೇವಲ ಹೆಸರಲ್ಲ ಸ್ವಾಭಿಮಾನ, ಶೌರ್ಯ, ಸ್ವಾತಂತ್ರ್ಯದ ಸಂಕೇತ" ಎಂದು ಬಣ್ಣಿಸಿದರು.

"ರಾಮಾಯಣದಲ್ಲಿ ರಾಮನಿಗಿಂತ ಸೀತೆಯ ಪಾತ್ರ ದೊಡ್ಡದು. ಸೀತೆಯ ತ್ಯಾಗ ಮಹಿಳೆಯರಿಗೆ ಮಾದರಿ. ಅದೇ ರೀತಿ ಚನ್ನಮ್ಮ ಅವರ ತ್ಯಾಗ, ಶೌರ್ಯ ಮಹಿಳೆಯರಿಗೆ ಮಾದರಿ. ರಾಜ್ಯದಲ್ಲಿ ಶಾಂತಿಯುತ ಉತ್ತಮ ಆಡಳಿತ ನೀಡುತ್ತಿದ್ದೇವೆ. ಈ ಕ್ಷೇತ್ರದ ಶಾಸಕರ ಜೊತೆ ಇಡೀ ಸರ್ಕಾರ ಇದೆ" ಎಂದು ತಿಳಿಸಿದರು.

ಆರ್‌ಎಸ್‌ಎಸ್ ಪಥಸಂಚಲನದ ಮೇಲೆ ಕಾಂಗ್ರೆಸ್ ಸರ್ಕಾರದಿಂದಲೇ ಹೆಚ್ಚಿನ ನಿರ್ಬಂಧ: ಅಶೋಕ್

ಬೆಂಗಳೂರು, ಅ.25: ಮಾಜಿ ಪ್ರಧಾನಿಗಳಾದ ಜವಹರಲಾಲ್ ನೆಹರೂ, ಇಂದಿರಾಗಾಂಧಿ ಕೂಡ ಹೇರದ ನಿರ್ಬಂಧಗಳನ್ನು ಕಾಂಗ್ರೆಸ್ ಸರ್ಕಾರ ಆರ್‌ಎಸ್‌ಎಸ್ ಪಥಸಂಚಲನದ ಮೇಲೆ ಹೇರಿದೆ. ಆದರೂ ಎಲ್ಲ ಕಡೆ ಯಶಸ್ವಿಯಾಗಿ ಪಥಸಂಚಲನ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ವಿಜಯದಶಮಿ ಅಂಗವಾಗಿ ಜಯನಗರದಲ್ಲಿ ಆಯೋಜಿಸಿದ್ದ ಪಥಸಂಚಲನದಲ್ಲಿ ಪಾಲ್ಗೊಂಡ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಈ ಬಾರಿ ಅನೇಕ ನಿರ್ಬಂಧಗಳನ್ನು ಹೇರಿದೆ. ಕೊನೆಯ ಸಮಯದವರೆಗೂ ಪಥಸಂಚಲನಕ್ಕೆ ಅನುಮತಿ ನೀಡಲು ಸತಾಯಿಸಲಾಗಿದೆ. ಮಾಜಿ ಪ್ರಧಾನಿಗಳಾದ ನೆಹರು ಹಾಗೂ ಇಂದಿರಾಗಾಂಧಿ ಕೂಡ ಹೀಗೆ ಮಾಡಿಲ್ಲ. ಕಿರುಕುಳದ ನಡುವೆಯೂ ಆರ್‌ಎಸ್‌ಎಸ್‌ನಿಂದ ವಿಜೃಂಭಣೆಯಿಂದ ಹಾಗೂ ಶಾಂತಿಯಿಂದ ಪಥಸಂಚಲನ ನಡೆಸಲಾಗಿದೆ ಎಂದರು.

ದೇಶಪ್ರೇಮದ ಕೆಲಸವಷ್ಟೇ

ಆರ್‌ಎಸ್‌ಎಸ್‌ಗೆ ಅನುದಾನ ಬರುತ್ತಿದೆ ಎಂದು ಆರೋಪ ಮಾಡುವುದಾದರೆ, ಕಾಂಗ್ರೆಸ್ ಪಕ್ಷಕ್ಕೆ ಎಲ್ಲಿಂದ ಹಣ ಬರುತ್ತಿದೆ ಎಂದು ಕೇಳಬೇಕಾಗುತ್ತದೆ. ಕಾಂಗ್ರೆಸ್‌ಗೆ ಪಾಕಿಸ್ತಾನದಿಂದ, ಬಾಂಗ್ಲಾದೇಶದಿಂದ, ಅಮೆರಿಕದಿಂದ ಸಹಾಯಧನ ಬರುತ್ತಿದೆಯೇ. ಆರ್‌ಎಸ್‌ಎಸ್ ವಿದೇಶದಿಂದ ಹಣ ಕೇಳುವುದಿಲ್ಲ. ಕಾಕ್ರೋಚ್ ಜನತಾ ಪಾರ್ಟಿಯೊಂದಿಗೆ ಶಾಮೀಲಾದ ಕಾಂಗ್ರೆಸ್ ಪಕ್ಷ ಹೊರದೇಶಗಳಿಂದ ಹಣ ಬರುವಂತೆ ಮಾಡಿ ಆ ಹಣವನ್ನು ತಾನೇ ಪಡೆದುಕೊಂಡಿದೆ. ಆ ರೀತಿ ಸಂಘ ಎಂದಿಗೂ ಮಾಡುವುದಿಲ್ಲ. ದೇಶಪ್ರೇಮವನ್ನು ಬೆಳೆಸುವ ಕೆಲಸವನ್ನು ಮಾತ್ರ ಸಂಘ ಮಾಡುತ್ತದೆ. ಆರ್‌ಎಸ್‌ಎಸ್ ಬಗ್ಗೆ ಮಾತಾಡುವಾಗ ಸಚಿವ ಪ್ರಿಯಾಂಕ್ ಖರ್ಗೆ ಹುಷಾರಾಗಿರಬೇಕು. ಇಲ್ಲವಾದರೆ ಬೀದಿಗಳಲ್ಲಿ ಓಡಿಸುತ್ತಾರೆ. ಇದೇ ಮಾತನ್ನು ಮುಖ್ಯಮಂತ್ರಿಗಳಿಂದ ಹೇಳಿಸಲಿ. ಎಲ್ಲದಕ್ಕೂ ಇವರೇ ಮಾತಾಡುತ್ತಾರೆ. ಮುಖ್ಯಮಂತ್ರಿ ಮೌನವ್ರತ ಮಾಡುತ್ತಿದ್ದಾರಾ ಎಂದು ಅಶೋಕ್ ಪ್ರಶ್ನಿಸಿದರು.

175 ದೇಶಗಳಲ್ಲಿ ಕಾರ್ಯ

ಕಳೆದ ನೂರು ವರ್ಷಗಳಿಂದ ಪ್ರತಿ ವಿಜಯಶಮಿಯ ಸಮಯದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪಥ ಸಂಚಲನ ನಡೆಯುತ್ತಿದೆ. ಇದು ದೇಶಾದ್ಯಂತ ನಡೆಯುತ್ತಿದ್ದು, 50 ವರ್ಷಗಳಿಂದ ನಾನು ಸಂಘದ ಸ್ವಯಂಸೇವಕನಾಗಿ ಭಾಗವಹಿಸುತ್ತಿದ್ದೇನೆ. ಈ ಕುರಿತು ನನಗೆ ಬಹಳ ಹೆಮ್ಮೆ ಇದೆ. ಆರ್‌ಎಸ್‌ಎಸ್ ಎಂದರೆ ದೇಶಾಭಿಮಾನ ಬೆಳೆಸುವ ಹಾಗೂ ದೇಶಕ್ಕೆ ಸಂಕಷ್ಟ ಬಂದಾಗ ದೇಶದ ಜೊತೆ ನಿಲ್ಲುವ ಸಂಘಟನೆ. ಇದು ಸಾಮಾಜಿಕ ಸೇವಾ ಸಂಘಟನೆ. ಪ್ರಕೃತಿ ವಿಕೋಪಗಳಾದಾಗ, ಯುದ್ಧಗಳಾದಾಗ ದೇಶದ ಪರವಾಗಿ ನಿಲ್ಲುವ ಕೆಲಸವನ್ನು ಆರ್‌ಎಸ್‌ಎಸ್ ಮಾಡಿದೆ. 175 ದೇಶಗಳಲ

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಅಕ್ಟೋಬರ್ 26, 2026, ಸೋಮವಾರ

ಒಳಪುಟಗಳಲ್ಲಿ

12ನೇ ಬ್ರಿಕ್ಸ್ ಸಂಸದೀಯ ವೇದಿಕೆ ಆಯೋಜನೆಗೆ ಭಾರತ ಸಿದ್ಧತೆ- ಪು.4

ಜನಸಾಮಾನ್ಯರ ಕೊಡುಗೆಗಳಿಗೆ ಗೌರವ ಸಲ್ಲಿಸುವ ವೇದಿಕೆ ಮನ್‌ಕಿ ಬಾತ್: ಮೋದಿ- ಪು.4

ಬೆಂಗಳೂರು ನಗರ ಪೊಲೀಸರಿಗೆ ನಗರ ಸಾರಿಗೆ ಕ್ಷೇತ್ರದ ಪ್ರಶಂಸನಾ ಪ್ರಶಸ್ತಿ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಭಿನಂದನೆ-ಪು.5

ಉಕ್ರೇನ್ ಮೇಲಿನ ರಷ್ಯಾ ದಾಳಿಗೆ ಅಧ್ಯಕ್ಷ ಝೆಲೆನ್ಸ್ಕಿ ಖಂಡನೆ ಮೂಲಸೌಕರ್ಯಗಳಿಗೆ ಹಾನಿ, ಭಾರಿ ಜೀವಹಾನಿ: ಆಕ್ರೋಶ-ಪು.8

ನ.1ರಂದು ಇಂಡಿಯಾ ಒಕ್ಕೂಟದಿಂದ ಚಲೋ ದೆಹಲಿ ರ‍್ಯಾಲಿ

ನವದೆಹಲಿ, ಅ.25: ಚುನಾವಣಾ ಕ್ರಮಗಳ ವಿರುದ್ಧ ವಿರೋಧ ಪಕ್ಷದ 'ಮೋಸದ ಮತ' (ವೋಟ್ ಚೋರಿ) ಅಭಿಯಾನವನ್ನು ವ್ಯಾಪಕ ಜನಪಂದಲನವನ್ನಾಗಿ ಪರಿವರ್ತಿಸಲು ಇಂಡಿಯಾ ಒಕ್ಕೂಟ ನ.1ರಂದು ಹಮ್ಮಿಕೊಂಡಿರುವ ಚಲೋ ದೆಹಲಿ ರ‍್ಯಾಲಿಗೆ ಬೆಂಬಲ ನೀಡುವಂತೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಕರೆ ನೀಡಿದ್ದಾರೆ.

ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಭಾನುವಾರ ಮಾಹಿತಿ ಹಂಚಿಕೊಂಡಿರುವ ಅವರು, ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಮಹಿಳೆಯರು, ಯುವಕರು, ವ್ಯಾಪಾರಿಗಳು ಮತ್ತು ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆ ಕಾಳಜಿವುಳ್ಳ ಎಲ್ಲರೂ ಇಂಡಿಯಾ ಒಕ್ಕೂಟದ 'ಚಲೋ ದೆಹಲಿ' ಮೆರವಣಿಗೆ ಮತ್ತು ನವೆಂಬರ್ 1ರಂದು ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಬೃಹತ್ ರಾಲಿಯಲ್ಲಿ ಭಾಗವಹಿಸುವಂತೆ ತಿಳಿಸಿದ್ದಾರೆ. ಚುನಾವಣಾ ಕ್ರಮಗಳ ವಿರುದ್ಧ ವಿರೋಧ ಪಕ್ಷದ 'ಮೋಸದ ಮತ' ಅಭಿಯಾನವನ್ನು ವ್ಯಾಪಕ ಜನಪಂದಲನವನ್ನಾಗಿ ಪರಿವರ್ತಿಸಲು ಅವರು ಈ ಕರೆ ನೀಡಿದ್ದಾರೆ. ಎಕ್ಸ್ ಪೋಸ್ಟ್‌ನಲ್ಲಿ, ಮತದಾರರ ಪಟ್ಟಿಯಿಂದ ಮತದಾರರ ಹೆಸರುಗಳನ್ನು ಅಳಿಸಿಹಾಕಲಾಗುತ್ತಿದೆ ಎಂದು ಆರೋಪಿಸಿರುವ ಅವರು, ಪ್ರಜಾಪ್ರಭುತ್ವವನ್ನು ಉಳಿಸುವ ಹೋರಾಟದಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಮಹಿಳೆಯರು, ಯುವಕರು ಮತ್ತು ವ್ಯಾಪಾರಿಗಳಿಗೆ ಮನವಿ ಮಾಡಿದ್ದಾರೆ.

ನಮ್ಮ ಮತಗಳನ್ನು ಕಳ್ಳತನ ಮಾಡಲಾಗುತ್ತಿದೆ ಮತ್ತು ಯಾವುದೇ ಪರಿಸ್ಥಿತಿಯಲ್ಲೂ ನಾವು ಇದನ್ನು ಮೌನವಾಗಿ ಸಹಿಸುವುದಿಲ್ಲ" ಎಂದು ಗಾಂಧಿ ಹೇಳಿದ್ದಾರೆ.

ಸಿಇಸಿ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಮಹಿಳೆಯರು, ಯುವಕರು, ವ್ಯಾಪಾರಿಗಳಿಗೆ ರಾಹುಲ್ ಗಾಂಧಿ ಕರೆ

"ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗಿದೆ. ನಿಯಮಗಳು ಮತ್ತು ಕಾನೂನುಗಳನ್ನು ಮುರಿಯಲಾಗಿದೆ. ಮತ್ತು ಪ್ರಶ್ನೆಗಳನ್ನು ಕೇಳಿದವರ ಮೇಲೆ ಲಾಠಿಗಳನ್ನು ಬಳಸಲಾಗಿದೆ. ಈಗ ದೇಶವು ಪ್ರತಿಕ್ರಿಯಿಸುತ್ತದೆ.

ವಿರೋಧ ಪಕ್ಷದ "ವೋಟ್ ಚೋರಿ" (ಮತ ಕಳವು) ಅಭಿಯಾನವು ಚುನಾವಣಾ ಆಯೋಗದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿನ ಅನಿಯಮಿತತೆಗಳ ಮೇಲೆ ಕೇಂದ್ರೀಕೃತವಾಗಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಇಂಡಿಯಾ ಒಕ್ಕೂಟ ಒತ್ತಾಯಿಸುತ್ತಿದೆ ಎಂದಿದ್ದಾರೆ.

ಎನ್‌ಡಿಎ ವಿರುದ್ಧ ವಾಗ್ದಾಳಿ

ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್, "ಈ ಕಾರ್ಯಕ್ರಮವನ್ನು ಉತ್ಸಾಹದಿಂದ ಪ್ರಚಾರ ಮಾಡುತ್ತಿರುವ ಮತ್ತು ಅದನ್ನು ಹೆಚ್ಚು ಹೆಚ್ಚು ಜನರಿಗೆ ತಲುಪಿಸುತ್ತಿರುವ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಿಗೆ ಹೃತ್ಪೂರ್ವಕ ಧನ್ಯವಾದಗಳು" ಎಂದು ಬರೆದಿದ್ದಾರೆ. ಮುಂದಿನ ಏಳು ದಿನಗಳ ಕಾಲ ಇದೇ ಉತ್ಸಾಹವನ್ನು ಮುಂದುವರಿಸುವಂತೆ ಅವರು ಕೋರಿದ್ದಾರೆ. "ಮುಂದಿನ 7 ದಿನಗಳವರೆಗೆ ಇದೇ ಉತ್ಸಾಹ ಮತ್ತು ಸಮರ್ಪಣಾ ಭಾವವನ್ನು ಕಾಯ್ದುಕೊಳ್ಳಿ!" ಎಂದಿದ್ದಾರೆ.ದಿನಾಂಕದ ಆಯ್ಕೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ. ಗಾಂಧಿ ಅವರು ನವೆಂಬರ್ 1 ರಂದೇ ಮಾಡಲು 'ಪಟ್ಟುಹಿಡಿದಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ. ಇದು 1984ರ ಸಿಖ್ ವಿರೋಧಿ ಗಲಭೆಗಳ ವಾರ್ಷಿಕೋತ್ಸವವಾಗಿದ್ದು, ಇದು ಸಂತ್ರಸ್ತರ ಭಾವನೆಗಳಿಗೆ ಧಕ್ಕೆ ಉಂಟುಮಾಡುತ್ತಿದೆ ಎಂದು ಆರೋಪಿಸಿದೆ. ಬಿಹಾರದಲ್ಲಿ ಈ ಪ್ರಕ್ರಿಯೆಯು ಮೃತ, ಸ್ಥಳಾಂತರಗೊಂಡ ಮತ್ತು ನಕಲಿ ಮತದಾರರ ಹೆಸರುಗಳನ್ನು ತೆಗೆದುಹಾಕಿದೆ ಎಂದು ಹೇಳುವ ಮೂಲಕ ಚುನಾವಣಾ ಆಯೋಗವು ಎಸ್‌ಐಆರ್ ಸಮರ್ಥಿಸಿಕೊಂಡಿದೆ.

ಮತ ಉಳಿಸಿ, ದೇಶ ಉಳಿಸಿ ರ‍್ಯಾಲಿ ದೆಹಲಿಯಲ್ಲೇ ಇರುವಂತೆ ಕಾಂಗ್ರೆಸ್ ಸಂಸದರಿಗೆ ಖರ್ಗೆ ಸೂಚನೆ

ನವದೆಹಲಿ, ಅ.25: ಭಾರತೀಯ ಚುನಾವಣಾ ಆಯೋಗ ನಡೆಸಿದೆ ಎನ್ನಲಾದ ಮತ ಕಳ್ಳತನ ಮತ್ತು ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಇಂಡಿಯಾ ಮೈತ್ರಿಕೂಟದ ಪಕ್ಷಗಳು ಪ್ರತಿಭಟನೆ ಹಮ್ಮಿಕೊಂಡಿದ್ದು, ಅ.30ರಿಂದ ನ.1ರವರೆಗೆ ದೆಹಲಿಯಲ್ಲೇ ಇರುವಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಸಂಸದರಿಗೆ ಸೂಚಿಸಿದ್ದಾರೆ. ಮತ ಗಳ್ಳತನ ವಿಷಯಕ್ಕೆ ಸಂಬಂಧಿಸಿದ ಪ್ರತಿಭಟನೆ, ಕೇಂದ್ರ ಚುನಾವಣಾ ಆಯೋಗ ಹಾಗೂ ಮುಖ್ಯ ಚುನಾವಣಾ ಆಯುಕ್ತರು ಎಸಗಿರಬಹುದಾದ ಅಕ್ರಮ ಬಹಿರಂಗಪಡಿಸುವಿಕೆ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಕೋರಿದ್ದಾರೆ. ನವೆಂಬರ್ 1ರಂದು ರಾಷ್ಟ್ರ ರಾಜಧಾನಿಯ ರಾಮಲೀಲಾ ಮೈದಾನದಲ್ಲಿ 'ಮತ ಉಳಿಸಿ, ದೇಶ ಉಳಿಸಿ' ಶೀರ್ಷಿಕೆಯಡಿ ಬೃಹತ್ ರ‍್ಯಾಲಿ ನಡೆಯಲಿದೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗಿದೆ ಹಾಗೂ ನಿಯಮಗಳು ಮತ್ತು ಕಾನೂನುಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಈ ರ‍್ಯಾಲಿಯಲ್ಲಿ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಮಹಿಳೆಯರು, ಯುವಜನರು ಮತ್ತು ವ್ಯಾಪಾರಿಗಳು ಭಾಗವಹಿಸಬೇಕೆಂದು ಭಾನುವಾರ ಕರೆ ನೀಡಿದ್ದಾರೆ.

ದೀಪಾವಳಿ ಖರೀದಿಯಲ್ಲಿ ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳಿಗೆ ಆದ್ಯತೆ ನೀಡಿ: ಪ್ರಧಾನಿ ಮೋದಿ ಮನವಿ

ನವದೆಹಲಿ, ಅ.25: ದೀಪಾವಳಿ ಹಬ್ಬದ ಸಂದರ್ಭದಲ್ಲಿ ವಸ್ತುಗಳನ್ನು ಖರೀದಿಸುವಾಗ ಸ್ಥಳೀಯ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಆದ್ಯತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ದೇಶದ ಜನರಿಗೆ ಮನವಿ ಮಾಡಿದ್ದಾರೆ. ಸ್ಥಳೀಯ ಉತ್ಪನ್ನಗಳ ಖರೀದಿಯಿಂದ ಕುಶಲಕರ್ಮಿಗಳಿಗೆ ಪ್ರೋತ್ಸಾಹ ದೊರೆಯುವುದರ ಜತೆಗೆ, ವೋಕಲ್ ಫಾರ್ ಲೋಕಲ್ ಅಭಿಯಾನಕ್ಕೂ ಮತ್ತಷ್ಟು ಬಲ ಸಿಗಲಿದೆ ಎಂದು ಹೇಳಿದ್ದಾರೆ.

ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ 139ನೇ ಸಂಚಿಕೆಯಲ್ಲಿ ಭಾನುವಾರ ಮಾತನಾಡಿದ ಮೋದಿ, ಭಾರತದ ಸ್ಥಳೀಯ ಉತ್ಪನ್ನಗಳು ಈಗ ವಿದೇಶಿ ಮಾರುಕಟ್ಟೆಗಳಿಗೂ ತಲುಪುತ್ತಿವೆ ಎಂದು ತಿಳಿಸಿದರು. ಬಿಹಾರದ ಪೂರ್ಣಿಯಾದ ಮಖಾನಾ (ನೀರುಗಡಲೆ) ಗ್ರೀಸ್‌ಗೆ ತಲುಪುತ್ತಿದ್ದರೆ, ಕರ್ನಾಟಕದ ಕಲಬುರಗಿಯ ತೊಗರಿ ಬೇಳೆ ಮಾಲ್ಡೀವ್ಸ್‌ಗೆ ರಫ್ತಾಗುತ್ತಿದೆ ಎಂದು ಉದಾಹರಣೆ ನೀಡಿದರು.

ದೇಶದಲ್ಲಿ ಖಾದಿ ಉತ್ಪನ್ನಗಳ ಜನಪ್ರಿಯತೆ ಹೆಚ್ಚುತ್ತಿರುವುದನ್ನೂ ಅವರು ಉಲ್ಲೇಖಿಸಿದರು. ಗಾಂಧಿ ಜಯಂತಿಯಂದು ಖಾದಿ ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟ ಒಂದೇ ದಿನದಲ್ಲಿ 28 ಕೋಟಿ ದಾಟಿದ್ದು, ಹಿಂದಿನ ವರ್ಷಕ್ಕಿಂತ 1.5 ಕೋಟಿ ಹೆಚ್ಚಳವಾಗಿದೆ ಎಂದು ತಿಳಿಸಿದರು. ಇದರಿಂದ ಖಾದಿ ಮತ್ತು ಕರಕುಶಲ ಉತ್ಪನ್ನಗಳನ್ನು ತಯಾರಿಸುವವರ ಶ್ರಮಕ್ಕೆ ಮನ್ನಣೆ ದೊರೆಯುತ್ತಿದೆ ಎಂದರು.

ಪಂಜಾಬ್‌ನ ಮಾಲ್ವಾ ಪ್ರದೇಶದಲ್ಲಿ ನೈಸರ್ಗಿಕ ಹತ್ತಿ ಕೃಷಿ ಮತ್ತು ಸಾಂಪ್ರದಾಯಿಕ ನೇಯ್ಗೆಗೆ ಉತ್ತೇಜನ ನೀಡುತ್ತಿರುವ ನವ್-ತ್ರಿಂಜನ್ ಉಪಕ್ರಮದ ಬಗ್ಗೆಯೂ ಪ್ರಧಾನಿ ಪ್ರಸ್ತಾಪಿಸಿದರು. ರಾಸಾಯನಿಕಗಳ ಬಳಕೆಯಿಲ್ಲದೆ ಸಾವಯವ ಹತ್ತಿ ಬೆಳೆಯುವ ಈ ಪ್ರಯತ್ನವು ಪರಿಸರ ಸಂರಕ್ಷಣೆಗೆ ನೆರವಾಗುವುದರ ಜತೆಗೆ, ಮಹಿಳೆಯರಿಗೆ ನೇಯ್ಗೆ ಕೌಶಲ ಕಲಿತು ಸ್ವಾವಲಂಬಿಗಳಾಗಲು ಅವಕಾಶ ಕಲ್ಪಿಸಿದೆ ಎಂದು ಹೇಳಿದರು. ದೀಪಾವಳಿ ಮತ್ತು ಛಠ್ ಹಬ್ಬಗಳ ಹಿನ್ನೆಲೆಯಲ್ಲಿ ಸ್ವಚ್ಛತೆಯ ಮಹತ್ವವನ್ನೂ ಒತ್ತಿಹೇಳಿದ ಮೋದಿ, ಪ್ರತಿಯೊಬ್ಬರೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸ್ಥಳೀಯ ಕುಶಲಕರ್ಮಿಗಳು ತಯಾರಿಸಿದ ವಸ್ತುಗಳನ್ನು ಖರೀದಿಸುವ ಮೂಲಕ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕು. ಇಂತಹ ಖರೀದಿಗಳು ಸ್ಥಳೀಯ ಉದ್ಯೋಗ, ಸಾಂಪ್ರದಾಯಿಕ ಕಲೆ ಮತ್ತು ಗ್ರಾಮೀಣ ಆರ್ಥಿಕತೆಗೆ ನೆರವಾಗಲಿದ್ದು, ವೋಕಲ್ ಫಾರ್ ಲೋಕಲ್ ಅಭಿಯಾನವನ್ನು ಬಲಪಡಿಸುವ ಮೂಲಕ ಆತ್ಮನಿರ್ಭರ ಭಾರತದ ಗುರಿ ಸಾಧನೆಗೆ ವೇಗ ನೀಡಲಿವೆ ಎಂದು ಪ್ರಧಾನಿ ಮೋದಿ ಹೇಳಿದರು.

ಮನ್‌ಕೀ ಬಾತ್ 139ನೇ ಸಂಚಿಕೆ: ವೋಕಲ್ ಫಾರ್ ಲೋಕಲ್ ಅಭಿಯಾನಕ್ಕೆ ಬಲ ತುಂಬಿ, ಆತ್ಮನಿರ್ಭರ ಭಾರತದ ಕನಸು ನನಸಾಗಿಸಿ

ಪ್ಯಾಕಿಂಗ್‌ಗೆ ಬುಡಕಟ್ಟು ಕಲೆ ಬಳಸಿದ್ದಕ್ಕೆ ಜಪಾನ್‌ನ ಪ್ರತಿಷ್ಠಿತ ಪ್ರಶಸ್ತಿ

ಸ್ಥಳೀಯ ಉತ್ಪನ್ನಗಳ ಗುಣಮಟ್ಟದ ಜತೆಗೆ ಆಕರ್ಷಕ ಪ್ಯಾಕೇಜಿಂಗ್‌ಗೂ ಮಹತ್ವ ನೀಡಬೇಕೆಂದು ಪ್ರಧಾನಿ ಹೇಳಿದರು. ಉತ್ತಮ ಪ್ಯಾಕೇಜಿಂಗ್ ಗ್ರಾಹಕರನ್ನು ಆಕರ್ಷಿಸುವುದರಿಂದ ಉತ್ಪನ್ನಗಳ ಮಾರುಕಟ್ಟೆ ವಿಸ್ತರಣೆಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಮಹಾರಾಷ್ಟ್ರದ ಬುಡಕಟ್ಟು ಸಮುದಾಯಗಳು ತಯಾರಿಸುವ ಜೇನುತುಪ್ಪ, ಮಹುವಾ, ಚಿರೋಂಜಿ ಹಾಗೂ ಬಿದಿರಿನ ಉತ್ಪನ್ನಗಳನ್ನು ಶಬರಿ ನ್ಯಾಚುರಲ್ಸ್ ಉಪಕ್ರಮದ ಮೂಲಕ ಮಾರುಕಟ್ಟೆಗೆ ಪರಿಚಯಿಸಲಾಗುತ್ತಿದೆ. ಈ ಉತ್ಪನ್ನಗಳ ಪ್ಯಾಕೇಜಿಂಗ್‌ನಲ್ಲಿ ಬುಡಕಟ್ಟು ಕಲೆಯನ್ನು ಬಳಸಿರುವುದಕ್ಕೆ ಜಪಾನ್ ಪ್ರತಿಷ್ಠಿತ ಗುಡ್ ಡಿಸೈನ್ ಪ್ರಶಸ್ತಿ ದೊರೆತಿದೆ ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬುದ್ಧನ ಸಂದೇಶದಂತೆ ಮಾನವೀಯತೆ, ಶಾಂತಿ ಅಭಿವೃದ್ಧಿಗೆ ಆದ್ಯತೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಚಾಮರಾಜನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಬೌದ್ಧಮಹಾ ಸಮ್ಮೇಳನವನ್ನು ಸಿಎಂ ಡಿ ಕೆ ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಕೆ ಎಚ್ ಮುನಿಯಪ್ಪ, ನರೇಂದ್ರಸ್ವಾಮಿ, ಪುಟ್ಟರಂಗಶೆಟ್ಟಿ, ಬೌದ್ಧ ಸಮ್ಮೇಳನದ ಅಧ್ಯಕ್ಷ, ಶಾಸಕ ಎ ಆರ್ ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ಎಚ್ ಎಂ ಗಣೇಶ್ ಪ್ರಸಾದ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ನರೇಂದ್ರ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎಚ್ ವಿ ಚಂದ್ರು, ಮಾಜಿ ಶಾಸಕ ನರೇಂದ್ರ, ಜಿ ಎಂ ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಡಿ ಎಸ್ ವೀರಯ್ಯ, ಚೇತವನ ಬೌದ್ಧವಿಹಾರದ ಮನೋ ರಕ್ಷಿತ ಬಂತೇಜಿ, ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಇದ್ದರು.

ಚಾಮರಾಜನಗರ, ಅ.25: ಚಾಮರಾಜನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಅಪನಂಬಿಕೆ ಬೇಡ. ನಾವು ಪರಿಶುದ್ಧವಾಗಿ ಪ್ರಾರ್ಥನೆ, ನಂಬಿಕೆಯಿಂದ ನಡೆಯುವುದು ಮುಖ್ಯ. ನಾವು ಯಾವುದೇ ತಪ್ಪು ಮಾಡದೇ ದೇವರ ಬಳಿ ಒಳ್ಳೆಯದನ್ನೇ ಪ್ರಾರ್ಥಿಸುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಮಾಧ್ಯಮಗಳ ಜತೆ ಭಾನುವಾರ

■ ಚಾಮರಾಜನಗರದಲ್ಲಿ ಅಂತರರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನ ಉದ್ಘಾಟನೆ

ಮಾತನಾಡಿ, ನಾವು ಇಲ್ಲಿ ಅಭಿವೃದ್ಧಿ ಮತ್ತು ಪ್ರಗತಿಗಾಗಿ ಪ್ರಾರ್ಥಿಸಲು ಬಂದಿದ್ದೇವೆ. ಬುದ್ಧನ ಆಚಾರ-ವಿಚಾರಗಳನ್ನು ಸ್ಮರಿಸಿ, ಅವರ ಸಂದೇಶವನ್ನು ಅರಿತುಕೊಳ್ಳುವುದು ನಮ್ಮ ಉದ್ದೇಶ. ಬುದ್ಧರು ಜಗತ್ತಿಗೆ ಮಾನವೀಯತೆ, ತ್ಯಾಗ, ಶಾಂತಿ ಮತ್ತು ಅಭಿವೃದ್ಧಿಯ ಮಹತ್ವದ ಸಂದೇಶ ನೀಡಿದ್ದಾರೆ. ಈ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲವನ್ನೂ ಅನುಮಾನದಿಂದ ನೋಡುವ ಮನೋಭಾವ ಬೇಡ ಎಂದು ಹೇಳಿದರು.

ಸಿದ್ದರಾಮಯ್ಯ ಅಧಿಕಾರದಲ್ಲಿ ಇದ್ದಾಗ ಚಾಮರಾಜನಗರಕ್ಕೆ ಭೇಟಿ ನೀಡುತ್ತಿದ್ದರು. ಅವರು ಉತ್ತಮ ಆಡಳಿತವನ್ನೂ ನಡೆಸಿದ್ದಾರೆ. ಹೀಗಿರುವಾಗ ಚಾಮರಾಜನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮಾತಿಗೆ ಅರ್ಥವಿಲ್ಲ ಎಂದು ತಿಳಿಸಿದರು.

ಹತ್ತು ಸಾಧಕ ಗಣ್ಯರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು, ಅ.25: ರಾಜ್ಯ ಸರ್ಕಾರದಿಂದ ಅಕ್ಟೋಬರ್ 26ರಂದು ಆಚರಿಸಲಾಗುವ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರಿಗೆ 2026–27ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಘೋಷಿಸಲಾಗಿದೆ.

■ ಇಂದು ವಾಲ್ಮೀಕಿ ಜಯಂತಿ ಆಚರಣೆ; ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನ

ಪ್ರಶಸ್ತಿಗಾಗಿ ನೇಮಿಸಿದ್ದ ಆಯ್ಕೆ ಸಮಿತಿಯು ಸ್ವೀಕೃತವಾದ ಒಟ್ಟು 137 ಅರ್ಜಿಗಳನ್ನು ಪರಿಶೀಲಿಸಿ, ಶೈಕ್ಷಣಿಕ, ಸಾಹಿತ್ಯ, ಸಾಂಸ್ಕೃತಿಕ, ವಿಜ್ಞಾನ ಹಾಗೂ ತಂತ್ರಜ್ಞಾನ ಹಾಗೂ ಸಾಮಾಜಿಕ ಸೇವೆ, ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯಡಿ ಆಯ್ಕೆಯಾದ ಪ್ರತಿಯೊಬ್ಬ ಸಾಧಕರಿಗೆ 5 ಲಕ್ಷ ನಗದು ಬಹುಮಾನ ಹಾಗೂ 25 ಗ್ರಾಂ ಬಂಗಾರದ ಪದಕ ನೀಡಿ ಗೌರವಿಸಲಾಗುತ್ತದೆ.

ವಾಲ್ಮೀಕಿ ಜಯಂತಿಯ ಅಂಗವಾಗಿ ಬೆಂಗಳೂರಿನ ಬಸವನಗುಡಿಯ ಶ್ರೀ ಮಹರ್ಷಿ ವಾಲ್ಮೀಕಿ ಮಹಾ ಸಂಸ್ಥಾನದ ಆದಿಗುರು ಪೀಠದ ಶ್ರೀ ಬೇಡರ ಕಣ್ಣಪ್ಪ ಸ್ವಾಮಿ ದೇವಸ್ಥಾನದಿಂದ ವಾಲ್ಮೀಕಿ ಜ್ಯೋತಿ ಮೆರವಣಿಗೆ ಆರಂಭವಾಗಲಿದೆ. ಶ್ರೀ ಬಸವೇಶ್ವರ ವೃತ್ತದಿಂದ ವಿವಿಧ ಸಾಂಸ್ಕೃತಿಕ ಹಾಗೂ ಬುಡಕಟ್ಟು ಕಲಾತಂಡಗಳ ಪ್ರದರ್ಶನದೊಂದಿಗೆ ಮೆರವಣಿಗೆ ಮುಂದುವರಿಯಲಿದೆ. ನಂತರ ಶಾಸಕರ ಭವನದ ಮುಂಭಾಗದಲ್ಲಿರುವ ಶ್ರೀ ಮಹರ್ಷಿ ವಾಲ್ಮೀಕಿ ತಪೋವನದಲ್ಲಿನ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗುವುದು. ಬಳಿಕ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪ್ರಶಸ್ತಿ ಪುರಸ್ಕೃತರ ವಿವರ

● ತೇಜಸ್ವಿ ಕಟ್ಟಿಮನಿ, ಶೈಕ್ಷಣಿಕ ಕ್ಷೇತ್ರ, ಬೆಳಗಾವಿ ವಿಭಾಗ ● ತಿಪ್ಪಣ

ಅಯೋಧ್ಯೆ ರಾಮಮಂದಿರ ದೇಣಿಗೆ ಕಳ್ಳತನ ಪ್ರಕರಣ

ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಜೈರಾಮ್ ರಮೇಶ್ ಆಗ್ರಹ

ನವದೆಹಲಿ, ಅ.25: ಅಯೋಧ್ಯೆಯ ರಾಮ ಜನ್ಮಭೂಮಿ ಮಂದಿರಕ್ಕೆ ನೀಡಲಾದ ದೇಣಿಗೆಗಳು ಮತ್ತು ಕಾಣಿಕೆಗಳ ಸಂಗ್ರಹ ಹಾಗೂ ಬಳಕೆಯ ಕುರಿತು ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ ಉಸ್ತುವಾರಿ) ಜೈರಾಮ್ ರಮೇಶ್ ಭಾನುವಾರ ಆಗ್ರಹಿಸಿದ್ದಾರೆ. ಆರ್ಥಿಕ ಅಕ್ರಮಗಳ ಆರೋಪಗಳನ್ನು ಮುಚ್ಚಿಹಾಕಲು ಮತ್ತು ಅದಕ್ಕೆ ಕಾರಣರಾದವರನ್ನು ರಕ್ಷಿಸಲು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ ಎಂದು ಅವರು ಆರೋಪಿಸಿದ್ದಾರೆ. ಮಂದಿರ ಟ್ರಸ್ಟ್‌ನ ಹೊಣೆಗಾರಿಕೆಯನ್ನು ಪ್ರಶ್ನಿಸಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನೂ ಟೀಕಿಸಿದ್ದಾರೆ. ಲಕ್ಷಾಂತರ ಭಕ್ತರ ನಂಬಿಕೆಯನ್ನು ಗೌರವಿಸಬೇಕು ಎಂದು ಹೇಳಿರುವ ಅವರು, ಉತ್ತರ ಪ್ರದೇಶಕ್ಕೆ ಭೇಟಿ ನೀಡಿದಾಗ ಈ ಆರೋಪಗಳ ಬಗ್ಗೆ ಪ್ರಧಾನಿ ಉತ್ತರಿಸಲಿ ಎಂದು ಸವಾಲು ಹಾಕಿದ್ದಾರೆ. ಹಗರಣ ಬೆಳಕಿಗೆ ಬಂದು ನಾಲ್ಕು ತಿಂಗಳು ಕಳೆದಿದ್ದರೂ, ಅಧಿಕಾರಿಗಳು ಕಳುವಾದ ಮೊತ್ತವನ್ನು ಬಹಿರಂಗಪಡಿಸಿಲ್ಲ ಅಥವಾ ಮಂದಿರ ಟ್ರಸ್ಟ್‌ನ ಹಿರಿಯ ಪದಾಧಿಕಾರಿಗಳ ಹೊಣೆಗಾರಿಕೆಯನ್ನು ನಿಗದಿಪಡಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಜೈರಾಮ್ ರಮೇಶ್, "ಚಂದಾ ಚೋರಿ, ಆಸ್ಥಾ ಧೋಖಾ" (ದೇಣಿಗೆ ಕಳ್ಳತನ, ನಂಬಿಕೆಗೆ ದ್ರೋಹ) ಮತ್ತು "ರಾಮ್ ನಾಮ್ ಸೇ ಸತ್ತಾ ಪಾಯಿ, ಚಂದಾ ಚೋರಿ ಪರ್ ಚುಪ್ಪಿ ಛಾಯಿ" (ಶ್ರೀರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬಂದರು, ಆದರೆ ದೇಣಿಗೆ ಕಳ್ಳತನದ ವಿಷಯದಲ್ಲಿ ಮೌನ ವಹಿಸಿದ್ದಾರೆ) ಎಂಬ ಘೋಷಣೆಗಳನ್ನು ಬಳಸಿದ್ದಾರೆ. ಹಿಂದೂ ಧರ್ಮದ ಅತ್ಯಂತ ಪವಿತ್ರ ಸ್ಥಳಗಳಲ್ಲಿ ಒಂದಾದ ಇಲ್ಲಿ, ಭಕ್ತರು ನೀಡಿದ ಕಾಣಿಕೆಗಳಿಗೆ ಸಂಬಂಧಿಸಿದ ವಿವಾದದಲ್ಲಿ ಹೊಣೆಗಾರಿಕೆಯನ್ನು ಖಚಿತಪಡಿಸುವಲ್ಲಿ ವಿಫಲವಾಗಿರುವ ಬಿಜೆಪಿ, ರಾಜಕೀಯ ಅಧಿಕಾರ ಪಡೆಯಲು ಶ್ರೀರಾಮನ ಹೆಸರನ್ನು ಬಳಸಿಕೊಂಡಿದೆ ಎಂದು ಅವರು ದೂರಿದ್ದಾರೆ. ಬಿಜೆಪಿ ಮತ್ತು ಸಂಘ ಪರಿವಾರದೊಂದಿಗೆ ಗುರುತಿಸಿಕೊಂಡಿರುವ ವ್ಯಕ್ತಿಗಳ ವಿರುದ್ಧ ಆರೋಪಗಳು ಬಂದಾಗ, ಅವರು ಹೊಣೆಗಾರಿಕೆಯನ್ನು ನಿಗದಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಉತ್ತರ ಪ್ರದೇಶ ಸರ್ಕಾರವು ಸ್ವತಂತ್ರವಾಗಿ ವಿಶ್ವಾಸಾರ್ಹ ತನಿಖೆಯನ್ನು ನಡೆಸುತ್ತದೆ ಎಂಬ ನಂಬಿಕೆ ಕಾಂಗ್ರೆಸ್‌ಗೆ ಇಲ್ಲ ಎಂದು ಅವರು ಹೇಳಿದ್ದಾರೆ.

ಸಾರ್ವಜನಿಕ ನಂಬಿಕೆಯನ್ನು ಕಾಪಾಡುವ ಜವಾಬ್ದಾರಿಗಿಂತ ರಾಜಕೀಯ ಹಿತಾಸಕ್ತಿಗಳಿಗೆ ಬಿಜೆಪಿ ಹೆಚ್ಚಿನ ಆದ್ಯತೆ ನೀಡುತ್ತಿದೆ. ನಾಗರಿಕರು ಹೊಣೆಗಾರಿಕೆಯನ್ನು ಒತ್ತಾಯಿಸಬೇಕೆಂದು ಕರೆ ನೀಡಿದ್ದಾರೆ. ಕಳುವಾದ ಮೊತ್ತವೆಷ್ಟು ತನಿಖೆ ಸಮರ್ಪಕವಾಗಿದೆಯೇ ಆರ್ಥಿಕ ಸುರಕ್ಷತಾ ಕ್ರಮ ಪಾಲಿಸಲಾಗಿದೆಯೇ ಮತ್ತು ತನಿಖೆಯನ್ನು ಮುಕ್ತಾಯಗೊಳಿಸುವ ಮೊದಲು ಹಿರಿಯ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನು ಅವರು ಮುಂದಿಟ್ಟಿದ್ದಾರೆ.

ಜ್ಞಾನೇಶ್ ಕುಮಾರ್ ವಿರುದ್ಧದ ಪ್ರತಿಭಟನೆಗೆ 10 ಲಕ್ಷ ಜನ ನಿರೀಕ್ಷೆ

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತರ ವಜಾಗೆ ಆಗ್ರಹಿಸಿ ನ.1 ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಇಂಡಿಯಾ ಒಕ್ಕೂಟದ ಪ್ರತಿಭಟನಾ ರ್ಯಾಲಿಯಲ್ಲಿ ಕನಿಷ್ಠ 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆಯಿದೆ ಎಂದು ಕಾಂಗ್ರೆಸ್ ಪಕ್ಷ ಹೇಳಿಕೊಂಡಿದೆ.

ಈ ಬಗ್ಗೆ ಹರಿಯಾಣ ಕಾಂಗ್ರೆಸ್ ಉಸ್ತುವಾರಿ ಸಂಜಯ್ ದತ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರಾವ್ ನರೇಂದ್ರ ಸಿಂಗ್ ಮಾತನಾಡಿ, ಮತದಾರರ ಪಟ್ಟಿಯ ನಿಖರತೆ, ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಅರ್ಹ ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕಿನ ರಕ್ಷಣೆ ಇವು ದೇಶದ ಪ್ರಜಾಪ್ರಭುತ್ವಕ್ಕೆ ಅತ್ಯಗತ್ಯವಾದ ಅಡಿಪಾಯಗಳಾಗಿವೆ ಎಂದರು.

ಈ ವಿಷಯಗಳಲ್ಲಿ ಕಾಂಗ್ರೆಸ್ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ರ್ಯಾಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕುವಂತೆ ಕಾಂಗ್ರೆಸ್ ಆಗ್ರಹಿಸಲಿದೆ. ರಾಷ್ಟ್ರವ್ಯಾಪಿ ವೋಟ್ ಬಚಾವೋ, ದೇಶ್ ಬಚಾವೋ (ಮತ ಉಳಿಸಿ, ದೇಶ ಉಳಿಸಿ) ಅಭಿಯಾನವು ನಿರ್ಣಾಯಕ ಹಂತವನ್ನು ತಲುಪಿದೆ. ಈ ಅಭಿಯಾನವನ್ನು ಪ್ರತಿ ಜಿಲ್ಲೆ, ಬ್ಲಾಕ್, ಗ್ರಾಮ ಮತ್ತು ಮತಗಟ್ಟೆ ಮಟ್ಟಕ್ಕೆ ಕೊಂಡೊಯ್ಯಲು ಹರಿಯಾಣದಾದ್ಯಂತ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಮತದಾರರ ಪಟ್ಟಿಯಲ್ಲಿ ಕಂಡುಬಂದಿರುವ ಲೋಪದೋಷ ದಾಖಲಿಸಲು, ಅರ್ಹ ಮತದಾರರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಮತ್ತು ನ.1 ರ ರ್ಯಾಲಿಯಲ್ಲಿ ಹರಿಯಾಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ನೋಡಿಕೊಳ್ಳಲು ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಲಾಗಿದೆ. ಮುಖ್ಯ ಚುನಾವಣಾ ಆಯುಕ್ತರ ಪಾತ್ರದ ಬಗ್ಗೆ ಪ್ರಶ್ನೆ ಎತ್ತಿದ ದತ್, ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತತೆಯನ್ನು ಖಚಿತಪಡಿಸುವುದು ಚುನಾವಣಾ ಆಯೋಗದ ಸಾಂವಿಧಾನಿಕ ಜವಾಬ್ದಾರಿಯಾಗಿದೆ. ಅರ್ಹರ ಹೆಸರನ್ನು ಪಟ್ಟಿಯಿಂದ ಕೈಬಿಡುವ ಸಾಧ್ಯತೆ ಮತ್ತು ಮತದಾರರ ಪಟ್ಟಿಯ ಪರಿಷ್ಕರಣೆಯ ವೇಳೆ ವರದಿಯಾಗಿರುವ ಲೋಪದೋಷಗಳ ಬಗ್ಗೆ ಗಮನ ಹರಿಸಬೇಕು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದ ಅಥವಾ ಕಾನೂನನ್ನು ಉಲ್ಲಂಘಿಸಿದ ಆರೋಪದಲ್ಲಿ ಅವರು ತಪ್ಪಿತಸ್ಥರೆಂದು ತನಿಖೆಯಲ್ಲಿ ಕಂಡುಬಂದರೆ, ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಅವರಿಗೆ ಪತ್ನಿ ವಿಯೋಗ

ಮುಂಬಯಿ, ಅ.24: ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಹಾಗೂ ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ, ವಿಜಯವಾಣಿ ವರದಿಗಾರ ಪಿ.ಬಿ.ಹರೀಶ್ ರೈ ಅವರ ಪತ್ನಿ ಉಷಾಕುಮಾರಿ (56.) ಶನಿವಾರ ಸಂಜೆ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಸೈಂಟ್ ಅಲೋಸಿಯಸ್ ಹೈಸ್ಕೂಲ್ ಮಂಗಳೂರಿನ ಇಲ್ಲಿ 28 ವರ್ಷಗಳ ಕಾಲ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಆ ಮೊದಲು ಚಿನ್ಮಯ ಹೈಸ್ಕೂಲ್ ಮಂಗಳೂರು ಮತ್ತು ಉಳ್ಳಾಲ ಅಲ್ಲಿನ ಭಾರತ್ ಹೈಸ್ಕೂಲ್‌ನಲ್ಲಿಯೂ ಕಾರ್ಯನಿರ್ವಹಿಸಿದ್ದರು. ಕೆಲಸಮಯದಿಂದ ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಪತಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಮಂಗಳೂರುನಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿದ್ದಾರೆ. ಉಷಾ ಕುಮಾರಿ ನಿಧನಕ್ಕೆ ಸಚಿವ ಯು.ಟಿ ಖಾದರ್, ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಹಾರಾಷ್ಟ್ರ ಘಟಕದ ನಿಕಟಪೂರ್ವ ಅಧ್ಯಕ್ಷ ರೋನ್ಸ್ ಬಂಟ್ವಾಳ್, ದ.ಕ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಮಾಜಿ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ, ಕೆಯುಡಬ್ಲ್ಯೂಜೆ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಡಾ। ಶಿವ ಮೊಡಿಗೆರೆ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

12ನೇ ಬ್ರಿಕ್ಸ್ ಸಂಸದೀಯ ವೇದಿಕೆ ಆಯೋಜನೆಗೆ ಭಾರತ ಸಿದ್ಧತೆ

ರಷ್ಯಾದ ಡುಮಾ ಅಧ್ಯಕ್ಷ ವ್ಯಾಚೆಸ್ಲಾವ್ ವೊಲೊಡಿನ್ ನೇತೃತ್ವದಿಂದ ಲೋಕಸಭಾಧ್ಯಕ್ಷ ಓಂ ಬಿರ್ಲಾ ಭೇಟಿ

ನವದೆಹಲಿ, ಅ.25: ಜನ-ಕೇಂದ್ರಿತ ಅಭಿವೃದ್ಧಿಗಾಗಿ ಸಂಸತ್ತುಗಳನ್ನು ಬಲಪಡಿಸುವುದು' ಎಂಬ ವಿಷಯದ ಅಡಿಯಲ್ಲಿ 12ನೇ ಬ್ರಿಕ್ಸ್ ಸಂಸದೀಯ ವೇದಿಕೆಯನ್ನು ಆಯೋಜಿಸಲು ಸಂಸತ್ತು ಸಜ್ಜಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡುವ ನಿಯೋಗಗಳ ನಾಯಕರನ್ನು ಭೇಟಿ ಮಾಡಲಿದ್ದಾರೆ.

ಸೋಮವಾರ ಪ್ರಾರಂಭವಾಗುವ ಎರಡು ದಿನಗಳ ವೇದಿಕೆಯ ಮುನ್ನಾದಿನ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ರಾಜ್ಯ ಡುಮಾ ಅಧ್ಯಕ್ಷ ವ್ಯಾಚೆಸ್ಲಾವ್ ವೊಲೊಡಿನ್ ನೇತೃತ್ವದ ರಷ್ಯಾದ ನಿಯೋಗವನ್ನು ಭೇಟಿ ಮಾಡಿದರು.

ಲೋಕಸಭಾ ಸಚಿವಾಲಯವು ಜಾಗತಿಕ ವೇದಿಕೆಗಳಲ್ಲಿ ಬಲವಾದ ಸಹಕಾರ ಮತ್ತು ಭಯೋತ್ಪಾದನೆ ವಿರುದ್ಧ ಜಂಟಿ ಪ್ರಯತ್ನಗಳನ್ನು ಎರಡೂ ಕಡೆಯವರು ಒತ್ತಿ ಹೇಳಿದರು. ಈ ವಿಷಯದ ಬಗ್ಗೆ ರಷ್ಯಾದ ಸ್ಥಿರ ಬೆಂಬಲಕ್ಕಾಗಿ ಬಿರ್ಲಾ ಧನ್ಯವಾದ ಅರ್ಪಿಸಿದರು ಮತ್ತು 2027 ರಲ್ಲಿ ಎರಡೂ ದೇಶಗಳು ರಾಜತಾಂತ್ರಿಕ ಸಂಬಂಧಗಳ 80 ವರ್ಷಗಳನ್ನು ಆಚರಿಸುತ್ತವೆ ಎಂದು ಗಮನಿಸಿದರು.

ಸ್ಪೀಕರ್ ಭಾರತ-ರಷ್ಯಾ ಅಂತರ-ಸಂಸದೀಯ ಆಯೋಗದ ನಿಯಮಿತ ಸಭೆಗಳು ಮತ್ತು ಹೆಚ್ಚಿನ ನಿಯೋಗ ವಿನಿಮಯಕ್ಕೆ ಕರೆ ನೀಡಿದರು, ವಿಶೇಷವಾಗಿ ಯುವ ಮತ್ತು ಮಹಿಳಾ ಸಂಸದೀಯ ಸದಸ್ಯರ ನಡುವೆ. ಪರಮಾಣು ಶಕ್ತಿ ಮತ್ತು ಉದ್ಯಮದಲ್ಲಿ ಸಹಕಾರದ ಬಗ್ಗೆಯೂ ಅವರು ಮಾತನಾಡಿದರು. ಭಾರತದ 2026 ರ ಬ್ರಿಕ್ಸ್ ಅಧ್ಯಕ್ಷತೆಯನ್ನು ಉಲ್ಲೇಖಿಸಿ, ಬಿರ್ಲಾ ಗುಂಪಿನ ಸಂಸದೀಯ ಸಹಕಾರದಲ್ಲಿ ರಷ್ಯಾದ ಸಕ್ರಿಯ ಪಾತ್ರವನ್ನು ಕೋರಿದರು, ಯುಎನ್ ಭದ್ರತಾ ಮಂಡಳಿಯ ಸುಧಾರಣೆಗೆ ಕರೆ ನೀಡಿದರು ಮತ್ತು ಶಾಶ್ವತ ಸದಸ್ಯತ್ವಕ್ಕಾಗಿ ಭಾರತದ ಪ್ರಯತ್ನವನ್ನು ಬೆಂಬಲಿಸಿದ್ದಕ್ಕಾಗಿ ಮಾಸ್ಕೋಗೆ ಧನ್ಯವಾದ ಅರ್ಪಿಸಿದರು. ಬಿರ್ಲಾ ಕ್ಯೂಬಾ, ಈಜಿಪ್ಟ್ ಮತ್ತು ಬೆಲಾರಸ್‌ನ ಸಂಸದೀಯ ನಿಯೋಗಗಳನ್ನು ಸಹ ಭೇಟಿಯಾದರು. ವೇದಿಕೆಯು ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಯ ಕುರಿತು ಪ್ರತಿಯೊಂದು ಅಧಿವೇಶನವನ್ನು ನಡೆಸುತ್ತದೆ. ಬ್ರಿಕ್ಸ್ ಸದಸ್ಯ ಮತ್ತು ಪಾಲುದಾರ ರಾಷ್ಟ್ರಗಳ ಅಂತರರಾಷ್ಟ್ರೀಯ ವ್ಯವಹಾರಗಳ ಸಮಿತಿಗಳ ಅಧ್ಯಕ್ಷರ ವಿಶೇಷ ಸಭೆಯಲ್ಲಿ ಸಂಸದೀಯ ರಾಜತಾಂತ್ರಿಕತೆ, ಸಾಮರ್ಥ್ಯ ವೃದ್ಧಿ ಮತ್ತು ಉತ್ತಮ ಅಭ್ಯಾಸಗಳ ಕುರಿತು ಚರ್ಚಿಸಲಾಗುವುದು.

ಜನಸಾಮಾನ್ಯರ ಕೊಡುಗೆಗಳಿಗೆ ಗೌರವ ಸಲ್ಲಿಸುವ ವೇದಿಕೆ ಮನ್‌ಕಿ ಬಾತ್: ಮೋದಿ

12 ವರ್ಷಗಳ ಪಯಣ ತೀರ್ಥಯಾತ್ರೆಗೆ ಸಮಾನ; 139ನೇ ಸಂಚಿಕೆಯಲ್ಲಿ ಜನಶಕ್ತಿಗೆ ಮೆಚ್ಚುಗೆ

ನವದೆಹಲಿ, ಅ.26: ಪ್ರಧಾನಿ ನರೇಂದ್ರ ಮೋದಿ ಅವರ ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್ 12 ವರ್ಷಗಳನ್ನು ಪೂರೈಸಿದ್ದು, ಈ ಪಯಣವನ್ನು ತೀರ್ಥಯಾತ್ರೆಗೆ ಹೋಲಿಸಿರುವ ಮೋದಿ, ದೇಶದ ಜನಸಾಮಾನ್ಯರ ಸಾಧನೆಗಳು ಮತ್ತು ಕೊಡುಗೆಗಳನ್ನು ಗುರುತಿಸಲು ಈ ಕಾರ್ಯಕ್ರಮ ಅವಕಾಶ ಕಲ್ಪಿಸಿದೆ ಎಂದು ಹೇಳಿದ್ದಾರೆ.

ಭಾನುವಾರ ಪ್ರಸಾರವಾದ ಮನ್ ಕಿ ಬಾತ್‌ನ 139ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, 12 ವರ್ಷಗಳ ಹಿಂದೆ ವಿಜಯದಶಮಿಯಂದು ಆರಂಭವಾದ ಕಾರ್ಯಕ್ರಮ ನಿರಂತರವಾಗಿ ಮುಂದುವರಿದಿದೆ. ಈ ಪಯಣದಲ್ಲಿ ದೇಶದ ಜನರು ಸಹಪ್ರಯಾಣಿಕರಷ್ಟೇ ಅಲ್ಲದೆ ಮಾರ್ಗದರ್ಶಕರೂ ಆಗಿದ್ದಾರೆ ಎಂದು ತಿಳಿಸಿದರು.

ಸಮಾಜ ಮತ್ತು ದೇಶದ ಹಿತಕ್ಕಾಗಿ ದುಡಿಯುವ ಅನೇಕ ವ್ಯಕ್ತಿಗಳ ಅಸಾಧಾರಣ ಕಾರ್ಯಗಳು ಬಹುತೇಕ ಜನರ ಗಮನಕ್ಕೆ ಬರುವುದಿಲ್ಲ. ಅಂತಹ ಸಾಧಕರ ಪರಿಶ್ರಮ, ಧೈರ್ಯ, ಬದ್ಧತೆ, ಸಮರ್ಪಣೆ ಹಾಗೂ ಸೇವಾ ಮನೋಭಾವವನ್ನು ಜನರ ಮುಂದಿಡಲು ಮನ್ ಕಿ ಬಾತ್ ನೆರವಾಗಿದೆ ಎಂದು ಪ್ರಧಾನಿ ಹೇಳಿದರು.

ಸಾಂಪ್ರದಾಯಿಕ ಕೃಷಿ, ನದಿ ಪುನಶ್ಚೇತನಕ್ಕೆ ಮೆಚ್ಚುಗೆ

ಪಂಜಾಬ್‌ನ ಮಾಲ್ವಾ ಪ್ರದೇಶದಲ್ಲಿ ರಾಸಾಯನಿಕ ಬಳಕೆಯಿಲ್ಲದೆ ನೈಸರ್ಗಿಕ ಹತ್ತಿ ಬೆಳೆಯುವ ನವ್-ತ್ರಿಂಜನ್ ಉಪಕ್ರಮದ ಬಗ್ಗೆಯೂ ಮೋದಿ ಪ್ರಸ್ತಾಪಿಸಿದರು. ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಪುನಶ್ಚೇತನ ಹಾಗೂ ನೇಯ್ಗೆ ಕೌಶಲವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನಗಳನ್ನು ಶ್ಲಾಘಿಸಿದರು. ಉತ್ತರಾಖಂಡದ ತೆಹ್ರಿ ಗರ್ವಾಲ್ ಜಿಲ್ಲೆಯಲ್ಲಿ ಸ್ಥಳೀಯರು ಮತ್ತು ಆಡಳಿತದ ಸಹಕಾರದಿಂದ ಹೆವಲ್ ನದಿಯನ್ನು ಪುನರುಜ್ಜೀವನಗೊಳಿಸಿರುವುದನ್ನು ಉಲ್ಲೇಖಿಸಿದರು. ಮಳೆನೀರು ಸಂಗ್ರಹ, ಅಂತರ್ಜಲ ಮರುಪೂರಣ ಮತ್ತು ಮರಗಳನ್ನು ನೆಡುವ ಮೂಲಕ ನದಿಯ ಜಲಮಟ್ಟ ಸುಧಾರಿಸಲು ಹಾಗೂ ಸುತ್ತಮುತ್ತಲಿನ ನೈಸರ್ಗಿಕ ಜಲಮೂಲಗಳನ್ನು ಪುನಶ್ಚೇತನಗೊಳಿಸಲು ಸಾಧ್ಯವಾಗಿದೆ ಎಂದರು.

ಕಾರ್ಯಕ್ರಮದ ಮೂಲಕ ದೇಶದ ಸಾಮೂಹಿಕ ಶಕ್ತಿಯಾದ ಜನಶಕ್ತಿಗೆ ಗೌರವ ಸಲ್ಲಿಸಲು ಮತ್ತು ದೇಶದ ಪ್ರತಿಯೊಂದು ಕುಟುಂಬದೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗಿದೆ. ಕಾರ್ಯಕ್ರಮ ಆಲಿಸಿದ ಬಳಿಕ ತಮ್ಮೊಂದಿಗೆ ಕುಟುಂಬದ ಸದಸ್ಯರಂತೆ ಸಂವಾದ ನಡೆಸಿದ ಅನುಭವವಾಗುತ್ತದೆ ಎಂದು ಅನೇಕರು ಸಂದೇಶ ಕಳುಹಿಸುತ್ತಾರೆ. ಶ್ರೋತೃಗಳಿಂದ ದೊರೆಯುವ ಈ ಪ್ರೀತಿ ಮತ್ತು ಆತ್ಮೀಯತೆ ಅಮೂಲ್ಯ ಆಸ್ತಿ ಎಂದು ಮೋದಿ ಅಭಿಪ್ರಾಯಪಟ್ಟರು.

ಇದಲ್ಲದೆ, ದೂರದ ಪ್ರದೇಶಗಳ ಜನರಿಗೂ ವೈದ್ಯಕೀಯ ಸಮಾಲೋಚನೆ ಒದಗಿಸುತ್ತಿರುವ ಇ-ಸಂಜೀವಿನಿ ಟೆಲಿಮೆಡಿಸಿನ್ ಸೇವೆಯ ಸಾಧನೆಯನ್ನು ಪ್ರಸ್ತಾಪಿಸಿದ ಪ್ರಧಾನಿ, ಈ ಸೇವೆಯ ಮೂಲಕ ಸುಮಾರು 50 ಕೋಟಿ ದೂರವೈದ್ಯಕೀಯ ಸಮಾಲೋಚನೆಗಳು ನಡೆದಿವೆ ಎಂದು ತಿಳಿಸಿದರು. ತಂತ್ರಜ್ಞಾನ, ವೈದ್ಯರ ಸೇವಾ ಮನೋಭಾವ ಮತ್ತು ಜನರ ವಿಶ್ವಾಸದ ಸಂಯೋಜನೆಗೆ ಇದು ಉತ್ತಮ ಉದಾಹರಣೆ ಎಂದು ಹೇಳಿದರು.

ಸನಾತನ ಧರ್ಮವನ್ನು ಬೆಂಬಲಿಸುತ್ತೇನೆ, ಹಿಂದುತ್ವವನ್ನಲ್ಲ

ಶಾಜಾಪುರ, ಅ.25: ಸನಾತನ ಧರ್ಮವನ್ನು ಬೆಂಬಲಿಸುತ್ತೇನೆ, ಆದರೆ ಹಿಂದುತ್ವವನ್ನಲ್ಲ ಎಂದು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಹೇಳಿದ್ದಾರೆ ಹಾಗೂ ಹಿಂದುತ್ವ ಎಂಬ ಪದವನ್ನು ವಿನಾಯಕ ದಾಮೋದರ ಸಾವರ್ಕರ್ ಸೃಷ್ಟಿಸಿದ್ದು ಎಂದು ಪ್ರತಿಪಾದಿಸಿದ್ದಾರೆ. ಶಾಜಾ ಪುರದಲ್ಲಿ ಆಯೋಜಿಸಿದ್ದ 'ಸತ್ಯ ಸನಾತನ ಸ್ವಾಭಿಮಾನ ಯಾತ್ರೆ'ಯಲ್ಲಿ ಭಾಗವಹಿಸಿದ್ದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ತಾಯಿ ಸನಾತನ ಧರ್ಮದ ಬಗ್ಗೆ ಕಲಿಸಿದ್ದಾರೆ. ಸನಾತನ ಧರ್ಮವು ಪ್ರೀತಿ, ವಾತ್ಸಲ್ಯ ಮತ್ತು ಕರುಣೆಯನ್ನು ಒಳಗೊಂಡಿದೆ. ಹಿಂದುತ್ವಕ್ಕೂ ಸಮಾನತೆಗೂ ಯಾವುದೇ ಸಂಬಂಧವಿಲ್ಲ ಎಂದಿದ್ದಾರೆ.



ಕುರಾನ್ ಬಗ್ಗೆಯೂ ಪ್ರಸ್ತಾಪ

ರಾಜ್ಯಾದ್ಯಂತ ಇಂದಿನಿಂದ ನ.1ರವರೆಗೆ ಜಾಗೃತಿ ಅರಿವು ಸಪ್ತಾಹ

ಭ್ರಷ್ಟಾಚಾರ ನಿರ್ಮೂಲನೆ, ಆಡಳಿತದಲ್ಲಿ ಪಾರದರ್ಶಕತೆ ತರುವ ಉದ್ದೇಶ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಪ್ರತಿಜ್ಞಾ ವಚನ ಬೋಧನೆ

ಬೆಂಗಳೂರು, ಅ.26: ರಾಜ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮತ್ತು ಆಡಳಿತದಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಅಕ್ಟೋಬರ್ 26ರಿಂದ ನವೆಂಬರ್ 1 ರವರೆಗೆ "ಜಾಗೃತಿ ಅರಿವು ಸಪ್ತಾಹ–2026"ನ್ನು ಆಚರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಿಆಸುಇ) ಸುತ್ತೋಲೆ ಹೊರಡಿಸಿದೆ. ಈ ವರ್ಷದ ಸಪ್ತಾಹವನ್ನು "ಸತ್ಯನಿಷ್ಠೆಯಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.

ಈ ಸಪ್ತಾಹದ ಅಂಗವಾಗಿ, ಅಕ್ಟೋಬರ್ 27 ರಂದು ಪೂರ್ವಾಹ್ನ 11.00 ಗಂಟೆಗೆ ಬೆಂಗಳೂರಿನ ವಿಕಾಸ ಸೌಧದ ಕೊಠಡಿ ಸಂಖ್ಯೆ 318 ರಲ್ಲಿ (3ನೇ ಮಹಡಿ) ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವಾಲಯದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ನೌಕರರಿಗೆ ಭ್ರಷ್ಟಾಚಾರ ವಿರೋಧಿ ಪ್ರತಿಜ್ಞಾ ವಚನವನ್ನು ಬೋಧಿಸಲಿದ್ದಾರೆ.

ಕೇಂದ್ರ ವಿಚಕ್ಷಣಾ ಆಯೋಗದ ನಿರ್ದೇಶನದಂತೆ ರಾಜ್ಯ ಸರ್ಕಾರದ ಎಲ್ಲಾ ಆಡಳಿತ ವಿಭಾಗಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಈ ಸಪ್ತಾಹದಡಿ ವಿವಿಧ ಜಾಗೃತಿ ಚಟುವಟಿಕೆಗಳನ್ನು ಕೈಗೊಳ್ಳಲು ತಿಳಿಸಲಾಗಿದೆ.

ಸಪ್ತಾಹ ಮುಕ್ತಾಯಗೊಂಡ ಒಂದು ವಾರದೊಳಗೆ ಸಂಬಂಧಪಟ್ಟ ಇಲಾಖೆಗಳು ಸಿಆಸುಇ (ಜಾಗೃತ ವಿಭಾಗ) ಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನಿರ್ದೇಶಿಸಿದ್ದಾರೆ.

ಕೆಇಎ: ಕಲ್ಯಾಣ ಕರ್ನಾಟಕ ವೃಂದ ಪರೀಕ್ಷೆ, ಶೇ.69ರಷ್ಟು ಹಾಜರಿ

ಬೆಂಗಳೂರು, ಅ.25: ಕಲ್ಯಾಣ ಕರ್ನಾಟಕ ವೃಂದದ ಭೂಮಾಪಕ, ಗ್ರಾಮ ಆಡಳಿತಾಧಿಕಾರಿ ಮತ್ತು ವಸತಿ ಶಾಲೆಗಳ ಶಿಕ್ಷಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇಂದು ಆಯೋಜಿಸಿದ್ದ ಲಿಖಿತ ಪರೀಕ್ಷೆ ಯಶಸ್ವಿಯಾಗಿ ನಡೆಯಿತು.

ಬೆಳಗಿನ ಪರೀಕ್ಷೆಗೆ ಒಟ್ಟು 90,584 ಅಭ್ಯರ್ಥಿಗಳ ಪೈಕಿ 62,916 (ಶೇ 69ರಷ್ಟು) ಮಂದಿ ಹಾಜರಾಗಿದ್ದರು. ಮಧ್ಯಾಹ್ನದ ನಂತರದ ಪರೀಕ್ಷೆಯಲ್ಲಿ 85,737 ಅಭ್ಯರ್ಥಿಗಳ ಪೈಕಿ 58,890 (ಶೇ 69 ರಷ್ಟು) ಮಂದಿ ಭಾಗವಹಿಸಿದ್ದರು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಶನಿವಾರ ಮತ್ತು ಭಾನುವಾರ ನಡೆದ ಲಿಖಿತ ಪರೀಕ್ಷೆಗೆ ಮೂರು ಹಂತದ ಒಎಂಆರ್ ಪ್ರತಿ ಪದ್ಧತಿಯನ್ನು ಜಾರಿ ಮಾಡಿದ್ದು, ಇದೊಂದು ಪಾರದರ್ಶಕ ಕ್ರಮಕ್ಕೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದ್ದಾರೆ.

ಮೂರು ಓಎಂಆರ್ ಪ್ರತಿಗಳ ಪೈಕಿ ಒಂದನ್ನು ಅಭ್ಯರ್ಥಿಗೆ ನೀಡಲಾಗುತ್ತದೆ. ಉಳಿದ ಎರಡು ಒಎಂಆರ್ ಪ್ರತಿಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಪ್ರಾಧಿಕಾರದ ಪ್ರತ್ಯೇಕ ಭದ್ರತಾ ಕೊಠಡಿಯಲ್ಲಿ ಶೇಖರಿಸಿಡಲಾಗುತ್ತದೆ. ಅನುಮಾನಗಳು ಬಂದಾಗ ಇವುಗಳನ್ನು ತೆಗೆದು ಪರಿಶೀಲಿಸಲು ಅನುಕೂಲ ಆಗಲಿ ಎನ್ನುವ ಕಾರಣಕ್ಕೆ ಈ ವ್ಯವಸ್ಥೆ ಜಾರಿ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳ (ಬಳ್ಳಾರಿ, ಬೀದರ್, ಕಲ್ಬುರ್ಗಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ) ಒಟ್ಟು 237 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು.

273 ವೈದ್ಯಕೀಯ ಸೀಟು ಉಳಿಕೆ ಆಯ್ಕೆ ದಾಖಲಿಸಲು ಕೊನೇ ಅವಕಾಶ

ಬೆಂಗಳೂರು, ಅ.25: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ನ ಸ್ಟ್ರೇ ವೇಕೆನ್ಸಿ–2 ಸುತ್ತಿನ ಸೀಟು ಹಂಚಿಕೆ ನಂತರವೂ 275 ಸೀಟು ಉಳಿದಿದ್ದು, ಮತ್ತೊಮ್ಮೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯ್ಕೆ ದಾಖಲಿಸಲು ಅವಕಾಶ ನೀಡಿದೆ.

ಇದುವರೆಗೂ ಸೀಟು ಹಂಚಿಕೆಯಾಗದ ಹಾಗೂ ಕಾಷನ್ ಡೆಪಾಸಿಟ್ ಕಟ್ಟಿರುವ ಅಭ್ಯರ್ಥಿಗಳು ಆಯ್ಕೆ ದಾಖಲಿಸಲು ಅ.27ರ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಒಟ್ಟು 273 ವೈದ್ಯಕೀಯ ಹಾಗೂ ಎರಡು ದಂತ ವೈದ್ಯಕೀಯ ಸೀಟು ಉಳಿದಿದ್ದು, ಈ ಕಾಲೇಜುಗಳಿಗೆ ಅ.26ರಂದು ಬೆಳಿಗ್ಗೆ 10.30ರವರೆಗೆ ಆಯ್ಕೆ ದಾಖಲಿಸಬಹುದು. ಅದಾದ ಅರ್ಧ ಗಂಟೆಯಲ್ಲಿ ಫಲಿತಾಂಶ ಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ಅ.26ರ ಸಂಜೆ 6ಗಂಟೆಯೊಳಗೆ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಂಸಿಸಿ ಆದೇಶಾನುಸಾರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಅ.26 ಕೊನೆ ದಿನವಾಗಿದ್ದು ಈ ಹಿನ್ನೆಲೆಯಲ್ಲಿ ಈ ಗಡುವು ನಿಗದಿ ಪಡಿಸಲಾಗಿದೆ. ಒಂದು ವೇಳೆ ನಿಗದಿತ ಅವಧಿಯೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳದಿದ್ದಲ್ಲಿ ಹಂಚಿಕೆಯಾದ ಸೀಟು ರದ್ದಾಗಲಿಗೆ ಎಂದು ಪ್ರಸನ್ನ ಅವರು ಎಚ್ಚರಿಸಿದ್ದಾರೆ.

ಸ್ಟ್ರೇ ವೇಕೆನ್ಸಿ– 2 ಫಲಿತಾಂಶ ಪ್ರಕಟ: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ನ ಸ್ಟ್ರೇ ವೇಕೆನ್ಸಿ–2 ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇಂದು ಪ್ರಕಟಿಸಿದೆ. ಈ ಸುತ್ತಿನಲ್ಲಿ 13 ವೈದ್ಯಕೀಯ ಮತ್ತು 12 ದಂತ ವೈದ್ಯಕೀಯ ಸೀಟು ಹಂಚಿಕೆಯಾಗಿದ್ದು, ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅ.26 ಕೊನೆ ದಿನ ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ನಗರ ಪೊಲೀಸರಿಗೆ ನಗರ ಸಾರಿಗೆ ಕ್ಷೇತ್ರದ ಪ್ರಶಂಸನಾ ಪ್ರಶಸ್ತಿ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಭಿನಂದನೆ

ಬೆಂಗಳೂರು, ಅ.25: ನಗರ ಸಾರಿಗೆ ನಿರ್ವಹಣೆಯಲ್ಲಿ ತಂತ್ರಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಸಾಕ್ಷ್ಯಾಧಾರಿತ ಸಾರಿಗೆ ಯೋಜನೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಬೆಂಗಳೂರು ಸಂಚಾರ ಪೊಲೀಸರಿಗೆ ಕೇಂದ್ರ ಸರ್ಕಾರದ ನಗರ ಸಾರಿಗೆ ಕ್ಷೇತ್ರದ ಪ್ರಶಂಸನಾ ಪ್ರಶಸ್ತಿ ಲಭಿಸಿದೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ನೀಡುವ ಈ ಪ್ರಶಸ್ತಿಗೆ ಕಾರ್ಯಾಚರಣೆ ಮತ್ತು ಸಾಕ್ಷ್ಯಾಧಾರಿತ ಸಾರಿಗೆ ಯೋಜನೆಗಾಗಿ ಬೃಹತ್ ದತ್ತಾಂಶ ವಿಶ್ಲೇಷಣೆಯ ಅತ್ಯುತ್ತಮ ಬಳಕೆ ವಿಭಾಗದಲ್ಲಿ ಬೆಂಗಳೂರು ಸಂಚಾರ ಪೊಲೀಸರನ್ನು ಆಯ್ಕೆ ಮಾಡಿರುವುದು ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ನಗರಗಳಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ, ಸಂಚಾರ ನಿರ್ವಹಣೆಯ ಸವಾಲುಗಳು ಮತ್ತು ರಸ್ತೆ ಸುರಕ್ಷತೆಯ

ಅಗತ್ಯಗಳನ್ನು ಸಮರ್ಥವಾಗಿ ಎದುರಿಸಲು ಆಧುನಿಕ ತಂತ್ರಜ್ಞಾನ, ದತ್ತಾಂಶ ವಿಶ್ಲೇಷಣೆ ಹಾಗೂ ವಾಸ್ತವಿಕ ಮಾಹಿತಿಯ ಆಧಾರದ ಮೇಲೆ ನಿರ್ಧಾರಗಳನ್ನು ಕೈಗೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಸಂಚಾರ ಪೊಲೀಸರು ಕೈಗೊಂಡಿರುವ ಪ್ರಯತ್ನಗಳಿಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ ದೊರೆತಿರುವುದು ಶ್ಲಾಘನೀಯವಾಗಿದೆ ಎಂದು ಸಚಿವರು ಹೇಳಿದ್ದಾರೆ.

ಬೆಂಗಳೂರು ನಗರದಲ್ಲಿ ಸುಗಮ ಸಂಚಾರ ವ್ಯವಸ್ಥೆ ರೂಪಿಸುವುದು, ಸಂಚಾರ ದಟ್ಟಣೆಯನ್ನು ವೈಜ್ಞಾನಿಕವಾಗಿ ನಿರ್ವಹಿಸುವುದು ಮತ್ತು ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಪರಿಣಾಮಕಾರಿ ಸಾರಿಗೆ ಅನುಭವ ಒದಗಿಸುವುದು ಮಹತ್ವದ ಆದ್ಯತೆಗಳಾಗಿವೆ. ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೃತ್ತಿಪರತೆ, ತಾಂತ್ರಿಕ ನೈಪುಣ್ಯ ಹಾಗೂ ಸಮರ್ಪಿತ ಸೇವೆಗೆ ಈ ಪ್ರಶಸ್ತಿ ಸಾಕ್ಷಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

2026ರ ಅಕ್ಟೋಬರ್ 24ರಂದು ಒಡಿಶಾದ ಭುವನೇಶ್ವರದ ಮೇಫೇರ್ ಸ್ಯಾಂಕ್ಚುರಿಯಲ್ಲಿ ನಡೆದ ನಗರ ಸಾರಿಗೆ ಭಾರತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರಾದ ಮನೋಹರ್ ಲಾಲ್ ಸೇರಿದಂತೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರು ಸಂಚಾರ ಪೊಲೀಸರ ಈ ಸಾಧನೆಯು ರಾಜ್ಯದ ಇತರ ನಗರಗಳಲ್ಲಿಯೂ ತಂತ್ರಜ್ಞಾನ ಆಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಗಳನ್ನು ಬಲಪಡಿಸಲು ಪ್ರೇರಣೆಯಾಗಲಿದೆ. ಸಾರ್ವಜನಿಕರ ಸುರಕ್ಷತೆ, ಸುಗಮ ಸಂಚಾರ ಮತ್ತು ಆಧುನಿಕ ನಗರ ನಿರ್ವಹಣೆಗೆ ಕರ್ನಾಟಕ ಸರ್ಕಾರ ಬದ್ಧವಾಗಿದೆ.
–ಪ್ರಿಯಾಂಕ್ ಖರ್ಗೆ, ಗೃಹ ಸಚಿವ

ಬೆಂಗಳೂರು ಆಸ್ತಿ ಮಾಲೀಕರಿಗೆ ಸಿಹಿಸುದ್ದಿ: ಅ.31ರಿಂದ ಇ-ಖಾತಾ ಮೇಳ ಪುನರಾರಂಭ

ಬೆಂಗಳೂರು, ಅ.25: ಬೆಂಗಳೂರಿನ ಆಸ್ತಿ ಮಾಲೀಕರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಬಿಗ್ ರಿಲೀಫ್ ನೀಡಿದೆ. ನಗರದಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಇ-ಖಾತಾ ವಿಶೇಷ ಮೇಳಗಳು ಅಕ್ಟೋಬರ್ 31 ರಿಂದ ಮತ್ತೆ ಆರಂಭವಾಗಲಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಐದು ಪಾಲಿಕೆಗಳ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಗಳು ಹಾಗೂ ಗುರುತಿಸಲಾದ ಇತರ ಸ್ಥಳಗಳಲ್ಲಿ ಇ-ಖಾತಾ ಮೇಳಗಳು ನಡೆಯಲಿವೆ. ಇ-ಖಾತಾ ಸೇವೆಗಳನ್ನು ಹೇಗೆ ಪಡೆಯಬೇಕು ಎಂಬುದನ್ನು ವಿವರಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸಾರ್ವಜನಿಕರು ಜಿಬಿಎ ಇ-ಆಸ್ತಿ ಪೋರ್ಟಲ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ಪಡೆಯಲು, ಹೊಸ ಖಾತೆ ಮಾಡಿಸಲು ಅಥವಾ ಬಿ ಖಾತಾವನ್ನು ಎ ಖಾತೆಯಾಗಿ ಪರಿವರ್ತಿಸಲು ತೊಂದರೆ ಎದುರಿಸುತ್ತಿರುವವರು ಜನಸೇವಕ ಸೇವೆಯ ಪ್ರಯೋಜನ ಪಡೆಯಬಹುದು. ಜನಸೇವಕ ಪ್ರತಿನಿಧಿಗಳು ಮನೆಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ನೆರವಾಗಲಿದ್ದಾರೆ.

ಈ ಸೇವೆ ಪಡೆಯಲು ಸಾರ್ವಜನಿಕರು ಜನಸೇವಕ ವೆಬ್‌ಸೈಟ್ ಮೂಲಕ ಸಮಯ ನಿಗದಿಪಡಿಸಿಕೊಳ್ಳಬಹುದು ಅಥವಾ ನೀಡಿರುವ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಜಿಬಿಎ ವ್ಯಾಪ್ತಿಯ 140 ಬೆಂಗಳೂರು ಒನ್ ಕೇಂದ್ರಗಳಲ್ಲಿಯೂ ಇ-ಖಾತಾಗೆ ಅರ್ಜಿ ಸಲ್ಲಿಸುವ ಸೌಲಭ್ಯ ಲಭ್ಯವಿದೆ. ಇ-ಖಾತಾ ಸೇವೆಗಳ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ಸಾರ್ವಜನಿಕರು ಕಂದಾಯ ಇಲಾಖೆಯ ಯೂಟ್ಯೂಬ್ ಚಾನೆಲ್ ವೀಕ್ಷಿಸಬಹುದು. ಸ್ವತಃ ಅರ್ಜಿ ಸಲ್ಲಿಸಲು ಜಿಬಿಎ ಇ-ಆಸ್ತಿ ಪೋರ್ಟಲ್ ಅಥವಾ ಸಹಾಯವಾಣಿ ಸಂಖ್ಯೆ 080–42474411 / 8904085030ಅನ್ನೂ ಬಳಸಬಹುದು.

ಕೆಸೆಟ್-26: ತಾತ್ಕಾಲಿಕ ಫಲಿತಾಂಶ ಪ್ರಕಟ

ಬೆಂಗಳೂರು, ಸೆ.25: ಅಕ್ಟೋಬರ್ 11ರಂದು ಒಟ್ಟು 37 ವಿಷಯಗಳಿಗೆ ನಡೆದ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆಸೆಟ್) ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಕೀ ಉತ್ತರಗಳಿಗೆ ಬಂದ ಆಕ್ಷೇಪಣೆಗಳನ್ನು ಪರಿಗಣಿಸಿ ಈ ಫಲಿತಾಂಶ ಪ್ರಕಟಿಸಲಾಗಿದೆ. ಇದಕ್ಕೆ ಆಕ್ಷೇಪಣೆಗಳು ಇದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಅ.26ರ ಬೆಳಿಗ್ಗೆ 10.30 ಗಂಟೆಯೊಳಗೆ ಇ–ಮೇಲ್ (cetonline.Karnataka.gov.in/kea/) ಮೂಲಕ ತಿಳಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ತಾತ್ಕಾಲಿಕ ಫಲಿತಾಂಶದ ಜತೆಗೆ ಅಂತಿಮ ಕೀ ಉತ್ತರಗಳನ್ನೂ ಪ್ರಕಟಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ದಸರಾ ಶಿಷ್ಟಾಚಾರ ನಿರ್ವಹಣೆ: ಹಂಚಿನಾಳ್‌ಗೆ ಸಿಎಸ್ ಪ್ರಶಂಸೆ

ಬೆಂಗಳೂರು, ಅ.25: ಬೆಂಗಳೂರು ನಾಡಹಬ್ಬ ದಸರಾ ಮಹೋತ್ಸವ–2026ರ ಸಂದರ್ಭದಲ್ಲಿ ಶಿಷ್ಟಾಚಾರಕ್ಕೆ ಸಂಬಂಧಿಸಿದ ಎಲ್ಲಾ ವ್ಯವಸ್ಥೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಶಿಷ್ಟಾಚಾರ) ಸರ್ಕಾರದ ವಿಶೇಷ ಕಾರ್ಯದರ್ಶಿ ವೀರಭದ್ರ ಹಂಚಿನಾಳ್ ಕಾರ್ಯವೈಖರಿಯನ್ನು ಸರ್ಕಾರಿ ಪ್ರಶಂಶಿಸಿದೆ.

ಕೆಎಎಸ್ ಅಧಿಕಾರಿ ವೀರಭದ್ರ ಹಂಚಿನಾಳ್‌ರವರಿಗೆ ಅಭಿನಂದನಾ ಪತ್ರ ಬರೆದಿರುವ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ದಸರಾ ಮಹೋತ್ಸವದಲ್ಲಿ ಶಿಷ್ಟಾಚಾರಕ್ಕೆ ಸಂಬಂಧಿಸಿದ ಎಲ್ಲಾ ವ್ಯವಸ್ಥೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಕಾರ್ಯವೈಖರಿಯನ್ನು ಹೃತ್ಪೂರ್ವಕವಾಗಿ ಪ್ರಶಂಸಿಸುವುದಾಗಿ ತಿಳಿಸಿದ್ದಾರೆ. ಅಲ್ಲದೆ ದಸರಾ ಮಹೋತ್ಸವವು ರಾಜ್ಯದ ಸಾಂಸ್ಕೃತಿಕ ಪರಂಪರೆ ಮತ್ತು ವೈಭವವನ್ನು ಜಗತ್ತಿಗೆ ಪರಿಚಯಿಸುವ ಪ್ರತಿಷ್ಠಿತ ಉತ್ಸವವಾಗಿದೆ. ತಾವು ಮುಂದಿನ ದಿನಗಳಲ್ಲಿಯೂ ಬದ್ಧತೆಯಿಂದ ಕಾರ್ಯನಿರ್ವಹಣೆಯನ್ನು ಮುಂದುವರೆಸಿ ಎಂದು ಹೇಳಿದ್ದಾರೆ.

ಕೆಇಎ ನೇಮಕಾತಿ ಪರೀಕ್ಷೆ: ವೇಳಾಪಟ್ಟಿ ಪ್ರಕಟ

ಬೆಂಗಳೂರು, ಅ.25: ಪೌರಾಡಳಿತ ನಿರ್ದೇಶನಾಲಯ, ಇಎಸ್‌ಐ, ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸಂಬಂಧಿಸಿದಂತೆ ಕಲ್ಯಾಣ ಕರ್ನಾಟಕ ವೃಂದದ ವಿವಿಧ ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಗಳನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೇಳಾಪಟ್ಟಿಯನ್ನು ಪ್ರಕಟಿಸಿದೆ. ನ.6, ನ.7 ಮತ್ತು ನ.14ರಂದು ನಿರ್ದಿಷ್ಟ ಹಾಗೂ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದಂತೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಪೌರಾಡಳಿತ ನಿರ್ದೇಶನಾಲಯದ ಎಲೆಕ್ಟ್ರೀಷಿಯನ್ ಗ್ರೇಡ್– 1 (3 ಹುದ್ದೆ) ಮತ್ತು ಗ್ರೇಡ್– 2 (5 ಹುದ್ದೆ) ಹುದ್ದೆಗಳಿಗೆ ನ.6ರಂದು ನಿರ್ದಿಷ್ಟ ಪತ್ರಿಕೆಯ ಲಿಖಿತ ಪರೀಕ್ಷೆ ಇರಲಿದೆ. ಇಎಸ್‌ಐ ನ ಫಾರ್ಮಸಿ ಅಧಿಕಾರಿ (11 ಹುದ್ದೆ) ಹಾಗೂ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನರ್ಸಿಂಗ್ ಅಧಿಕಾರಿ (ಶುಶ್ರೂಷಾಧಿ ಕಾರಿ– 23 ಹುದ್ದೆ) ಹಾಗೂ ನರ್ಸಿಂಗ್ ಅಧಿಕಾರಿ (11) ಹುದ್ದೆಗಳಿಗೆ ನ.7ರಂದು ನಿರ್ದಿಷ್ಟ ಪತ್ರಿಕೆಯ ಪರೀಕ್ಷೆ ನಡೆಯಲಿದೆ. ಪೌರಾಡಳಿತ ನಿರ್ದೇ ಶನಾಲಯದ ನೀರು ಸರಬರಾಜು ಆಪರೇಟರ್ (122 ಹುದ್ದೆ) ಹಾಗೂ ಸಹಾಯಕ ನೀರು ಸರಬರಾಜು ಆಪರೇಟರ್ (80 ಹುದ್ದೆ) ಹುದ್ದೆಗಳಿಗೆ ನಿರ್ದಿಷ್ಟ ಪತ್ರಿಕೆಯ ಪರೀಕ್ಷೆ ಅ.14ರಂದು ನಡೆಯಲಿದೆ.

ಮುಖ್ಯಮಂತ್ರಿ ವಿರುದ್ಧ ಎಚ್.ಡಿ.ಕು

ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ ಭಾನುವಾರ ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ವಿಜಯದಶಮಿ ಪಥಸಂಚಲನದಲ್ಲಿ ಭಾಗವಹಿಸಿದ್ದರು..

125 ಎಕರೆಯಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕೆ ಯೋಜನೆ: ಖಂಡ್ರೆ

ಬೀದರ್, ಅ. 25: ನಗರದ ಸಮೀಪ 125 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಜಿಲ್ಲಾ ಕ್ರೀಡಾಂಗಣ ನಿರ್ಮಿಸಲು ಯೋಜಿಸಲಾಗಿದ್ದು, ಸೂಕ್ತ ಜಾಗ ಗುರುತಿಸಿದ ಬಳಿಕ ಸಚಿವ ಸಂಪುಟದ ಅನುಮೋದನೆ ಪಡೆದು ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದ ಗುರುನಾನಕ ದೇವ ಎಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ ವತಿಯಿಂದ 'ಬೇಟಿ ಪಡಾವೋ, ಬೇಟಿ ಬಚಾವೋ' ಘೋಷವಾಕ್ಯದಡಿ ಆಯೋಜಿಸಿರುವ ರೋಟರಿ ಕ್ರಿಕೆಟ್ ಪ್ರೀಮಿಯರ್ ಲೀಗ್ 3.0 ಟೂರ್ನಿಯ ಟ್ರೋಫಿ ಅನಾವರಣಗೊಳಿಸಿ ಅವರು ಮಾತನಾಡಿದರು.

ಭಾಲ್ಕಿಯಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಜಿಲ್ಲೆಯ ಎಲ್ಲ ಹೋಬಳಿಗಳಲ್ಲೂ ಕ್ರೀಡಾಂಗಣ ನಿರ್ಮಿಸಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರದಿಂದ 10 ಕೋಟಿ ಅನುದಾನ ಮೀಸಲಿಡಲಾಗಿದೆ. ಯುವಜನರು ಅತಿಯಾದ ಮೊಬೈಲ್ ಬಳಕೆಯಿಂದ ದೂರವಿದ್ದು, ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹೇಳಿದರು.

ಶಾಸಕ ರಹೀಂಖಾನ್ ಮಾತನಾಡಿ, ಬೀದರ್ ನಗರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಅಗತ್ಯ ಸೌಕರ್ಯ ಕಲ್ಪಿಸುವುದರ ಜತೆಗೆ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ರೋಟರಿ ಕ್ಲಬ್ ಅಧ್ಯಕ್ಷೆ ಸ್ಫೂರ್ತಿ ಬಸವರಾಜ ಧನ್ನೂರ ಮಾತನಾಡಿ, ಕ್ಲಬ್ ವತಿಯಿಂದ 25 ಲಕ್ಷ ವೆಚ್ಚದಲ್ಲಿ ಹಲವು ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲಾಗಿದೆ. ಕ್ಯಾನ್ಸರ್ ರೋಗಿಗಳಿಗೂ ನೆರವು ನೀಡಲಾಗಿದೆ. ಕ್ರಿಕೆಟ್ ಟೂರ್ನಿಯಿಂದ ಸಂಗ್ರಹವಾಗುವ ಹಣವನ್ನು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಬಲೀ ಕರಣಕ್ಕೆ ಬಳಸಲಾಗುವುದು ಎಂದು ತಿಳಿಸಿದರು.

ಟೂರ್ನಿಗೆ ಚಾಲನೆ

ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಶುಕ್ರವಾರ ಬಲೂನ್ ಹಾರಿಬಿಡುವ ಮೂಲಕ ಟೂರ್ನಿಗೆ ಚಾಲನೆ ನೀಡಿದರು. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ ಸಾಕ್ಷಿ ಕೆ. ಡಾಯಿಜೋಡೆ ಅವರನ್ನು ಸನ್ಮಾನಿಸಲಾಯಿತು. ಕ್ಲಬ್ ಅಧ್ಯಕ್ಷೆ ಸ್ಫೂರ್ತಿ ಧನ್ನೂರ, ಸಂತೋಷ್ ತಾಳಂಪಳ್ಳಿ, ಕೇಶವರೆಡ್ಡಿ, ಬಸವರಾಜ ಧನ್ನೂರ, ಸುವರ್ಣಾ ಧನ್ನೂರ, ಸುಹಾಸ್ ಸಬಾದೆ, ಯೋಗೇಂದ್ರ ಯದಲಾಪುರೆ ಮತ್ತಿತರರು ಇದ್ದರು.

ಸಾಧಕರನ್ನು ಮಾತ್ರವೇ ಸಮಾಜ ಸ್ಮರಿಸುತ್ತದೆ: ಸಚಿವ ಈಶ್ವರ ಖಂಡ್ರೆ

ವೀರಶೈವ ಲಿಂಗಾಯತ ಮಹಾಸಭಾ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗಿ

ಶಿವಮೊಗ್ಗ, ಅ.25: ಸಾಧಕರನ್ನು ಮಾತ್ರವೇ ಸಮಾಜ ಸ್ಮರಿಸುತ್ತದೆ. ಹೀಗಾಗಿ ಇಂದಿನ ಯುವಜನರು ಸಾಧನೆಯ ಉತ್ತುಂಗಕ್ಕೇರಬೇಕು, ಆ ಮೂಲಕ ದೇಶದ ಅಭಿವೃದ್ಧಿಗೆ ಸಹಕಾರಿಯಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ನಮ್ಮಲ್ಲಿ ಹಲವರಿಗೆ ತಮ್ಮ ತಾತನ ಹೆಸರು ಮಾತ್ರ ತಿಳಿದಿದೆ. ಮುತ್ತಾತ ಹಾಗೂ ಪೂರ್ವಜರ ಹೆಸರೂ ತಿಳಿದಿಲ್ಲ. ಆದರೆ ಸಾಧಕರನ್ನು ದೀರ್ಘಕಾಲದವರೆಗೆ ಜನ ಸ್ಮರಿಸುತ್ತಾರೆ. ಹೀಗಾಗಿ ಯುವಜನರು ವಿದ್ಯಾವಂತರಾಗಿ, ಬುದ್ಧಿವಂತರಾಗಿ, ಉನ್ನತ ಹುದ್ದೆಗಳನ್ನು ಅಲಂಕರಿಸಿ, ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಅನ್ನ, ಅಕ್ಷರ ಮತ್ತು ಆಶ್ರಯ ಎಂಬ ತ್ರಿವಿಧ ದಾಸೋಹದ ಮೂಲಕ ಎಲ್ಲ, ಜಾತಿ, ಧರ್ಮದವರಿಗೂ ಗುಣಮಟ್ಟದ ಶಿಕ್ಷಣ ನೀಡಿದ ಕೀರ್ತಿ ನಮ್ಮ ಸಮಾಜದ ಮಠ–ಮಾನ್ಯಗಳಿಗೆ ಸಲ್ಲುತ್ತದೆ. ನಾವು ನಮ್ಮ ಪೂರ್ವಜರ ಹಿರಿಮೆ ಕೊಂಡಾಡಿದರೆ ಸಾಲದು, ವರ್ತಮಾನದ ಜೀವಂತಿಕೆಯೊಂದಿಗೆ ಹೊರಹೊಮ್ಮಬೇಕು ಎಂದರು.

ಯುವಜನರೇ ಯಾವುದೇ ಸಮಾಜದ ಬಲ. ಇಂದಿನ ಸಮಾರಂಭದಲ್ಲಿ ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಭಾಜನರಾದ ಬಲಿದಾನ್ ಬ್ಯಾಡ್ಜ್ ಪುರಸ್ಕೃತೆ ಮೇಜರ್ ಡಾ. ದೀಕ್ಷಾ ಮುದದೇವಣ್ಣನವರ್ ನಮ್ಮೊಂದಿಗಿದ್ದಾರೆ. ಇಂತಹ ಸಾಧಕರು ನಿಮಗೆ ಪ್ರೇರಣೆಯಾಗಬೇಕು ಎಂದರು.

ಇಂದು ನಾವು ಆಧುನಿಕ ಸಮಾಜದಲ್ಲಿದ್ದೇವೆ. ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್ ಕಾಲಘಟ್ಟದಲ್ಲಿದ್ದೇವೆ. ಮನುಷ್ಯನೇ ನಿರ್ಮಿಸಿದ ಈ ತಂತ್ರಜ್ಞಾನ

ಜನರ ಉದ್ಯೋಗವನ್ನೇ ಕಸಿಯುತ್ತಿದೆ. ಈ ನಿಟ್ಟಿನಲ್ಲಿ ಯುವಜನರು ವಿದ್ಯೆಯ ಜೊತೆಗೆ ಬುದ್ಧಿವಂತಿಕೆ, ಕೌಶಲ ಬೆಳೆಸಿಕೊಳ್ಳಬೇಕು. ವಿಶ್ವಕ್ಕೇ ಪ್ರಜಾಪ್ರಭುತ್ವ ಮತ್ತು ಸಂಸತ್ತಿನ ಪರಿಕಲ್ಪನೆಕೊಟ್ಟ ಬಸವಕಲ್ಯಾಣ ದಲ್ಲಿ 750 ಕೋಟಿ ರೂ. ವೆಚ್ಚದಲ್ಲಿ ಭವ್ಯ, ದಿವ್ಯ ಅನುಭವ ಮಂಟಪ ನಿರ್ಮಾಣ ಮಾಡಲಾಗುತ್ತಿದ್ದು, ಮುಂದಿನ ವರ್ಷ ಬಸವಜಯಂತಿ ಯೊಳಗೆ ಪೂರ್ಣಗೊಳಿಸಲು ಶ್ರಮಿ ಸುತ್ತಿರುವುದಾಗಿ ಖಂಡ್ರೆ ತಿಳಿಸಿದರು.

ತಾವು 2015–16ರಲ್ಲಿ ಸಚಿವ ನಾಗಿದ್ದಾಗ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿಗೆ ನಿಯೋಗ ಹೋಗಿ ಮನವಿ ಮಾಡಿದಾಗ ಅವರು ಅತ್ಯಾಧುನಿಕ ಅನುಭವ ಮಂಟಪ ನಿರ್ಮಿಸಲು ಅನುಮತಿಸಿದರು. ನಂತರ ಯಡಿಯೂರಪ್ಪನವರು 200 ಕೋಟಿ ರೂ. ನೀಡಿದರು. ಕಾಮಗಾರಿ ಆರಂಭವಾಯಿತು. ಮತ್ತೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದ ಬಳಿಕ ಮತ್ತು ಈಗ ಡಿ.ಕೆ. ಶಿವಕುಮಾರ್ ಅವರ ಕಾರ್ಯಕಾಲದಲ್ಲಿ 330 ಕೋಟಿ ರೂ. ಅನುದಾನ ಬಿಡುಗಡೆ ಆಗಿದ್ದು, ಕಾಮಗಾರಿ ತ್ವರಿತಗತಿಯಲ್ಲಿ ಸಾಗಿದೆ. 770 ಅಮರ ಗಣಂಗಳ ಸ್ಮರಣಾರ್ಥ 770 ಕಂಬಗಳ ಮೇಲೆ ಅನುಭವಮಂಟಪ ಕಟ್ಟಿದ್ದು, ಎಲ್ಲ ಕಂಬದಲ್ಲಿ ವಚನಗಳನ್ನು ಕೆತ್ತಿಸಲಾಗಿದೆ. ಇಲ್ಲಿ ವೈಜ್ಞಾನಿಕವಾಗಿ ಇಷ್ಟಲಿಂಗಪೂಜೆಯ ಪರಿಕಲ್ಪನೆಯನ್ನೂ ಸೇರಿಸಲಾಗಿದೆ ಎಂದರು.

ಕೆಳದಿ ಕರ್ನಾಟಕ ಎಂದು ಮರುನಾಮಕರಣ ಮಾಡಬೇಕು ಎಂಬ ಸಮಾಜದ ಬೇಡಿಕೆಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಈ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುವುದು.ವೀರಶೈವ ಲಿಂಗಾಯತ ಬೇರೆ ಬೇರೆ ಅಲ್ಲ. ಎರಡೂ ಒಂದೇ ನಾಣ್ಯದ ಎರಡು ಮುಖಗಳು ಎಂದು ಸಿದ್ದಗಂಗಾಮಠದ ಲಿಂಗೈಕ್ಯ ಡಾ. ಶಿವಕುಮಾರಸ್ವಾಮೀಜಿ ಅವರೇ ಸ್ವಹಸ್ತಾಕ್ಷರದಲ್ಲಿ ಬರೆದು ಕೊಟ್ಟಿದ್ದಾರೆ. ನಮ್ಮ ಸಮಾಜಕ್ಕೆ ಬಸವಾದಿ ಪ್ರಮಥರ, ರೇಣುಕಾದಿ ಆಚಾರ್ಯರ ಹಾಗೂ ಗುರುವಿರಕ್ತರ ಆಶೀರ್ವಾದವಿದ್ದು, ನಮ್ಮ ಸಮಾಜವನ್ನು ಯಾರಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ ಎಂದರು.

ಮಾಜಿ ಸಚಿವ ರೇಣುಕಾಚಾರ್ಯ ಮಾತನಾಡಿ, ಲಿಂಗೈಕ್ಯ ಭೀಮಣ್ಣ ಖಂಡ್ರೆ ಅವರು ವೀರಶೈವ ಲಿಂಗಾಯತ ಸಮಾಜವನ್ನು ಉಳಿಸುವುದರ ಜೊತೆಗೆ ಬೆಳೆಸುವ ಕೆಲಸ ಮಾಡಿದರು ಎಂದರು.

ಮೈಸೂರು ವನ್ಯಜೀವಿ ರಕ್ಷಣಾ ಕೇಂದ್ರಕ್ಕೆ ಕೆ.ವಿ.ಪ್ರಭಾಕರ್ ಭೇಟಿ: ಸಿಬ್ಬಂದಿಗೆ ಸಮವಸ್ತ್ರ ವಿತರಣೆ

ಮೈಸೂರು, ಅ.25: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮೈಸೂರಿನ ಚಾಮುಂಡಿ ವನ್ಯಜೀವಿ ರಕ್ಷಣಾ ಮತ್ತು ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿ ಸಿಬ್ಬಂದಿಗೆ ಸಮವಸ್ತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕಿ ಅನುಷಾ ಪಿ., ಉಪನಿರ್ದೇಶಕ ಲಕ್ಷ್ಮೀಕಾಂತ್ ಹಾಗೂ ವಲಯ ಅರಣ್ಯಾಧಿಕಾರಿ ಎಸ್. ರವಿಕುಮಾರ್ ಹಾಜರಿದ್ದರು.

ವನ್ಯಜೀವಿಗಳ ರಕ್ಷಣೆಯಲ್ಲಿ ರೆಸ್ಕ್ಯೂ ಸೆಂಟರ್ ಪಾತ್ರ

ಮೈಸೂರು ಮೃಗಾಲಯದ ಅಧೀನದಲ್ಲಿರುವ ಕೂರ್ಗಳ್ಳಿ ವನ್ಯಜೀವಿ ರಕ್ಷಣಾ ಮತ್ತು ಪುನರ್ವಸತಿ ಕೇಂದ್ರವು ಸಂಕಷ್ಟದಲ್ಲಿರುವ ವನ್ಯಜೀವಿಗಳ ರಕ್ಷಣೆ, ಆರೈಕೆ ಮತ್ತು ಪುನರ್ವಸತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಸುಮಾರು 136 ಎಕರೆ ಅರಣ್ಯ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಈ ಕೇಂದ್ರದಲ್ಲಿ ಹುಲಿ, ಚಿರತೆ, ಆನೆ ಸೇರಿದಂತೆ ವಿವಿಧ ವನ್ಯಜೀವಿಗಳನ್ನು ಆರೈಕೆ ಮಾಡಲಾಗುತ್ತದೆ. ಇಲ್ಲಿ ಸಂರಕ್ಷಣಾ ಸಂತಾನೋತ್ಪತ್ತಿ ಕಾರ್ಯಕ್ರಮಗಳೂ ನಡೆಯುತ್ತವೆ.

ಅರಣ್ಯ ಪ್ರದೇಶದಿಂದ ಹೊರ ಬರುವ, ಗಾಯಗೊಂಡಿರುವ ಅಥವಾ ವಿವಿಧ ಕಾರಣಗಳಿಂದ ನೈಸರ್ಗಿಕ ಆವಾಸಸ್ಥಾನದಲ್ಲಿ ಬದುಕಲು ಸಾಧ್ಯವಾಗದ ವನ್ಯಜೀವಿ ಗಳಿಗೆ ಸೂಕ್ತ ಆರೈಕೆ ಒದಗಿಸುವುದು ಇಂತಹ ಕೇಂದ್ರಗಳ ಪ್ರಮುಖ ಉದ್ದೇಶವಾಗಿದೆ.

ಸಿಬ್ಬಂದಿಯ ಸೇವೆಗೆ ಪ್ರೋತ್ಸಾಹ

ವನ್ಯಜೀವಿಗಳ ಆರೈಕೆ ಮತ್ತು ರಕ್ಷಣಾ ಕಾರ್ಯಗಳಲ್ಲಿ ತೊಡಗಿರುವ

ಸಿಬ್ಬಂದಿಗೆ ಸಮವಸ್ತ್ರ ವಿತರಿಸುವ ಮೂಲಕ ಅವರ ಸೇವೆಯನ್ನು ಗುರುತಿಸುವ ಕಾರ್ಯಕ್ರಮ ಇದಾಗಿದೆ.

ಪ್ರಾಣಿಗಳ ಆರೈಕೆ, ಅವುಗಳ ಸುರಕ್ಷತೆ ಹಾಗೂ ಕೇಂದ್ರದ ದೈನಂದಿನ ನಿರ್ವಹಣೆಯಲ್ಲಿ ಸಿಬ್ಬಂದಿಯ ಪಾತ್ರ ಮಹತ್ವದ್ದಾಗಿದೆ. ವನ್ಯಜೀವಿ ಸಂರಕ್ಷಣೆಯ ಕಾರ್ಯಗಳಲ್ಲಿ ತೊಡಗಿರುವ ಸಿಬ್ಬಂದಿಗೆ ಅಗತ್ಯ ಸೌಲಭ್ಯ ಮತ್ತು ಪ್ರೋತ್ಸಾಹ ದೊರೆಯುವುದು ಇಂತಹ ಕೇಂದ್ರಗಳ ಕಾರ್ಯನಿರ್ವಹಣೆಗೆ ಸಹಕಾರಿಯಾಗುತ್ತದೆ.

ಮಹಿಳಾ ಜ್ಞಾನವಿಕಾಸ ವಿಚಾರಗೋಷ್ಠಿ, ಸವಿತಾ ಗುತ್ತೇದಾರ್ ದೀಪ ಪ್ರಜ್ವಲನೆ

ಮಹಿಳೆಯರ ಸಬಲೀಕರಣಕ್ಕೆ ಸ್ವಾವಲಂಬನೆಯ ದಿಟ್ಟಹೆಜ್ಜೆಗೆ ಕರೆ

ಕಲಬುರಗಿ, ಅ.25– ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಲಬುರಗಿ ತಾಲೂಕು ಘಟಕದ ನೇತೃತ್ವದಲ್ಲಿ ಜ್ಞಾನ ವಿಕಾಸದ ಮಹಿಳೆಯರ ಸಬಲೀಕರಣಕ್ಕಾಗಿ ಸ್ವಾವಲಂಬನೆಯ ದಿಟ್ಟ ಹೆಜ್ಜೆ ಇಡುವ ಸಮಗ್ರ ಮಾಹಿತಿ ನೀಡುವ ವಿಚಾರ ಸಂಕಿರಣವನ್ನು ಸಮಾಜ ಸೇವಕಿ ಸವಿತಾ ಸತೀಶ್ ಗುತ್ತೇದಾರ್ ದೀಪ ಬೆಳಗಿಸಿ ಚಾಲನೆ ನೀಡಿದರು.

ಕಲಬುರಗಿಯ ಸಾಯಿ ಮಂದಿರದ ಸಭಾಂಗಣದಲ್ಲಿ ನಡೆದ ಕಲಬುರ್ಗಿ ತಾಲೂಕು ಮಟ್ಟದ ವಿಜ್ಞಾನ ವಿಕಾಸದ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಆರ್ಥಿಕ ಸೇರ್ಪಡೆ ಸ್ವಯಂಸೇವಾ ಸಂಸ್ಥೆಯ ಪಾತ್ರ ಉಳಿತಾಯದ ಮಹತ್ವ ಆರೋಗ್ಯ ಪಾಲನೆ ಕುಟುಂಬ ಪೋಷಣೆ ಮುಂತಾದ ವಿಷಯಗಳ ಕುರಿತು ಒಂದು ದಿನದ ವಿಚಾರ ಸಂಕೀರ್ಣ ಏರ್ಪಡಿಸಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕರಾದ ಗಣಪತಿ ಮಾಳಂಜಿ ಉಪಸ್ಥಿತರಿದ್ದರು. ಸಂಪನ್ಮೂಲ

ವ್ಯಕ್ತಿಯಾಗಿ ಸವಿತಾ ಬೀಳಗಿ ರಾಷ್ಟ್ರ ಸೇವಿಕ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಸುಮಂಗಲಾ ಚಕ್ರವರ್ತಿ ಮತ್ತು ಮನೋತಜ್ಞರಾದ ಡಾ. ಜಯಶ್ರೀ ಭಾಗವಹಿಸಿದರು. ಮಹಿಳಾ ಸಬಲೀಕರಣಕ್ಕೆ ಸ್ವಾವಲಂಬನೆ ಯೊಂದಿಗೆ ದಿಟ್ಟ ಹೆಜ್ಜೆ ಇಟ್ಟು ಅಭಿವೃದ್ಧಿ ಹೊಂದಲು ಕರೆ ನೀಡಲಾಯಿತು.ಮಕ್ಕಳ ಯಶಸ್ಸಿನಲ್ಲಿ ಪೋಷಕರ ಪಾತ್ರದ ಬಗ್ಗೆ ಕೂಡಾ ವಿಚಾರಗೋಷ್ಠಿ ಯನ್ನು ಹಮ್ಮಿಕೊಂಡಿದ್ದು ತಾಲೂಕು ಯೋಜನಾಧಿಕಾರಿ ಸಂಗಪ್ಪ ಮತ್ತು ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಜ್ಯೋತಿ ನಿರ್ವಹಣೆ ಮಾಡಿದರು . ನಂತರ ಮಂಜೂರಾತಿ ಆಗಿರುವ ಫಲಾನುಭವಿ ಗಳಿಗೆ ವಾತ್ಸಲ್ಯ ಮನೆ, ಮಾಶಾಸನ ಹಸ್ತಾಂತರ, ಸುಜ್ಞಾನ ನಿಧಿ ಮಂಜೂರಾತಿ ಆಗಿರುವ ಮಂಜೂರಾತಿ ಪತ್ರ ವಿತರಿಸಲಾಯಿತು. ಜ್ಞಾನ ದೀಪ ಶಿಕ್ಷಕರ ಮಂಜೂರಾತಿ ಪತ್ರಗಳನ್ನು ಈ ಸಂದರ್ಭದಲ್ಲಿನೀಡಲಾಯಿತ ು.ನಂತರ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸ ಲಾಯಿತು.ಬಳಿಕ ಬಹುಮಾನಗಳ ವಿತರಿಸಲಾಯಿತು.

ಕಮಲಾವತಿ ನದಿಯಲ್ಲಿ ಮೀನುಗಳ ಮಾರಣಹೋಮ

ನದಿಗೆ ರಾಸಾಯನಿಕ ಹರಿದಿರುವ ಶಂಕೆ, ಜನರ ಆಕ್ರೋಶ

ಕಲಬುರಗಿ, ಅ. 25: ಕಮಲಾವತಿ ನದಿಯಲ್ಲಿ ಸಾವಿರಾರು ಮೀನುಗಳು ಸಾವನ್ನಪ್ಪಿರುವ ಘಟನೆ ಸೇಡಂ ನಗರದ ಹೊರವಲಯದಲ್ಲಿ ನಡೆದಿರುವುದು ಇಂದು ಬೆಳಿಗ್ಗೆ ಕಂಡು ಬಂದಿದ್ದು, ಇಡೀ ನಗರದ ಜನತೆ ಆಕ್ರೋಶ ಗೊಳ್ಳುವಂತೆ ಮಾಡಿದೆ.

ಬೆಳಗ್ಗೆಯಿಂದಲೇ ಮೀನುಗಳು ಕೊಳೆತ ವಾಸನೆಯಿಂದ ಸ್ಥಳೀಯರು ಹೋಗಿ ನೋಡಿದಾಗ ಮಳೆಯಿಲ್ಲದೇ ಈಗಾಗಲೇ ನದಿಯ ಹರಿವು ನಿಂತಿದ್ದು, ಇರುವ ನೀರಿನಲ್ಲಿ ಸಹಸ್ರಾರು ಸತ್ತ ಮೇನುಗಳು ತೇಲುತ್ತಿರುವುದು ಕಂಡು ಸ್ಥಳೀಯರಲ್ಲಿ ಆತಂಕ ಹಾಗೂ ಆಕ್ರೋಶ ವ್ಯಕ್ತವಾಗಿದ್ದು, ನದಿ ನೀರಿನ ಗುಣಮಟ್ಟವನ್ನು ತಕ್ಷಣ ಪರೀಕ್ಷಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನದಿಗೆ ಕೈಗಾರಿಕಾ ತ್ಯಾಜ್ಯ ಸೇರ್ಪಡೆಯಾಗಿರುವು ದರಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮೀನುಗಳು ಮೃತಪಟ್ಟಿರುವ ಶಂಕೆ ಜನರಲ್ಲಿ ವ್ಯಕ್ತವಾಗಿದೆ.

ಸೇಡಂ ನಗರದ ಹೊರವಲಯದಲ್ಲಿ ಹರಿಯುವ ಕಮಲಾವತಿ ನದಿ ಈ ಭಾಗದ ಜನರ ಪಾಲಿಗೆ ಪ್ರಮುಖ ಜಲಮೂಲವಾಗಿದೆ. ಆದರೆ ಈ ವರ್ಷ ಮಳೆಯಿಲ್ಲದೇ ನೀರಿನ ಹರಿವು ನಿಂತು ಹೋಗಿದೆ. ಇದೀಗ ನದಿಯಲ್ಲಿ ಏಕಾಏಕಿ ಸಾವಿರಾರು ಮೀನುಗಳು ಮೃತಪಟ್ಟಿರುವುದು ಪರಿಸರದ ಬಗ್ಗೆ ಹಲವು ಅನುಮಾನಗಳನ್ನು ಹುಟ್ಟುಹಾಕಿದೆ.

ನಗರದಲ್ಲಿರುವ ಸಿಮೆಂಟ್ ಕಾರ್ಖಾಯಿಂದ ನದಿಗೆ ವಿಷಪೂರಿತ ರಾಸಾಯನಿಕ ನೀರು ಅಥವಾ

ಕೈಗಾರಿಕಾ ತ್ಯಾಜ್ಯ ಸೇರ್ಪಡೆಯಾಗಿರುವ ಸಾಧ್ಯತೆಯೇ ಮೀನುಗಳ ಸಾವಿಗೆ ಕಾರಣ ವಾಗಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ನದಿಯ ನೀರಿನಲ್ಲಿ ಯಾವುದೇ ವಿಷಕಾರಿ ರಾಸಾಯನಿಕ ಅಂಶಗಳು ಬೆರೆತಿವೆಯೇ ಎಂಬುದನ್ನು ಪರಿಶೀಲಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ವಿಶೇಷವಾಗಿ ನದಿಯ ನೀರನ್ನು ಪ್ರಾಣಿ–ಪಕ್ಷಿಗಳು ಹಾಗೂ ದನಕರುಗಳು ಸೇವಿಸುವ ಸಾಧ್ಯತೆ ಇರುವುದರಿಂದ, ಈ ನೀರು ಜೀವಿಗಳಿಗೆ ಅಪಾಯಕಾರಿಯಾಗಿದ್ದರೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಬಹುದು ಎಂಬ ಆತಂಕ ಸ್ಥಳೀಯರಲ್ಲಿದೆ.

ಕಮಲಾವತಿ ನದಿಯಲ್ಲಿ ಸಾವಿರಾರು ಮೀನುಗಳು ಏಕಾಏಕಿ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಪರಿಸರ ಹಾಗೂ ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ನದಿಯ ನೀರು, ಮೀನುಗಳು ಹಾಗೂ ಕೈಗಾರಿಕಾ ತ್ಯಾಜ್ಯದ ಮಾದರಿಗಳನ್ನು ಸಂಗ್ರಹಿಸಿ ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಬೇಕು ಎಂಬ ಆಗ್ರಹವೂ ಕೇಳಿ ಬಂದಿದೆ.

ಸಿಮೆಂಟ್ ಕಾರ್ಖಾನೆಯಿಂದಲೇ ವಿಷಪೂರಿತ ನೀರು ನದಿಗೆ ಹರಿದುಬಂದಿದೆ ಎಂಬ ಆರೋಪ ಕೇಳಿಬಂದಿದ್ದರೂ, ಈ ಬಗ್ಗೆ ಅಧಿಕೃತವಾಗಿ ಕಾರಣ ದೃಢಪಟ್ಟಿಲ್ಲ. ಹೀಗಾಗಿ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ನದಿಯಲ್ಲಿ ಮೀನುಗಳ ಸಾವಿಗೆ ನಿಖರ ಕಾರಣವೇನು ಎಂಬುದನ್ನು ಬಹಿರಂಗಪಡಿಸಬೇಕಿದೆ.

ಮೀನುಗ

ಸಂಶೋಧನೆ ಮೂಲಕ ರಾಷ್ಟ್ರೀಯ ಅಭಿವೃದ್ಧಿಗೆ ಕೊಡುಗೆ ನೀಡಲು ಕರೆ

ಕಲಬುರಗಿ, ಅ. 25: ವೈಜ್ಞಾನಿಕ ಸಂಶೋಧನೆಗಳನ್ನು ನವೀನ ಪರಿಹಾರಗಳಾಗಿ ಪರಿವರ್ತಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಬೇಕು ಎಂದು ನವದೆಹಲಿಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ಹಿರಿಯ ಪ್ರಧಾನ ವಿಜ್ಞಾನಿ ಡಾ.ಕನಿಕಾ ಮಲಿಕ್ ಕರೆ ನೀಡಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕಾನೂನು ಅಧ್ಯಯನ ವಿಭಾಗವು ಆಂತರಿಕ ಗುಣಮಟ್ಟ ಭರವಸೆ ಕೋಶದ (ಐಕ್ಯೂಎಸಿ) ಸಹಯೋಗದಲ್ಲಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಬೌದ್ಧಿಕ ಆಸ್ತಿ ಮತ್ತು ನೈತಿಕತೆ ಕುರಿತುರಾಷ್ಟ್ರೀಯ ಕಾರ್ಯಾಗಾರದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ತಾಂತ್ರಿಕ ಪ್ರಗತಿ, ಕಾನೂನು ರಕ್ಷಣೆ ಮತ್ತು ವಾಣಿಜ್ಯೀ ಕರಣದಲ್ಲಿ ಪೇಟೆಂಟ್‌ಗಳ ಮಹತ್ವವನ್ನು ವಿವರಿಸಿದರು. ಪೇಟೆಂಟ್ ಕರಡು ರಚನೆ,ಪರವಾನಗಿ ಮತ್ತು ಬೌದ್ಧಿಕ ಆಸ್ತಿ ನಿರ್ವಹ ಣೆಯ ಕುರಿತು ಅರಿವು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಸಲಹೆ ಮಾಡಿದರು.

ಕಾರ್ಯಾಗಾರವನ್ನು ಉದ್ಘಾಟಿಸಿದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಆಲೋಚನೆಗಳ ಆವಿಷ್ಕಾರಗಳನ್ನು ಪೇಟೆಂಟ್‌ಗಳು, ನವೀನ ಉತ್ಪನ್ನಗಳು ಮತ್ತು ಸ್ಟಾರ್ಟ್‌ಅಪ್‌ಗಳಾಗಿ ಪರಿವರ್ತಿಸಿ ವಿಕಸಿತ ಭಾರತ 2047ರ ಗುರಿ ಸಾಧನೆಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಮೂಲ ಆಲೋಚನೆಗಳ ರಕ್ಷಣೆ ಮತ್ತು ನಾವೀನ್ಯತೆಯ ಉತ್ತೇಜನದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ ಮಹತ್ವವನ್ನು ವಿವರಿಸಿದ ಅವರು, ಸಂಶೋಧನೆ, ನಾವೀನ್ಯತೆ ಹಾಗೂ ನೈತಿಕ ಸಂಶೋಧನಾ ಪದ್ಧತಿಗಳಿಗೆ ಆದ್ಯತೆ ನೀಡಿ ರಾಷ್ಟ್ರೀಯ ಅಭಿವೃದ್ಧಿ ಮತ್ತು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಪಾಲ್ಗೊಳ್ಳುವಂತೆ ವಿದ್ಯಾ ರ್ಥಿಗಳು ಹಾಗೂ ಸಂಶೋಧಕರಿಗೆ ಸಲಹೆ ನೀಡಿದರು.

ಐಕ್ಯೂಎಸಿ ನಿರ್ದೇಶಕರು ಹಾಗೂ ಎಂಜಿನಿಯರಿಂಗ್ ನಿಕಾಯದ ಡೀನ್ ಪ್ರೊ. ಎಂ.ಅಮರೇಂದ್ರ ಮತ್ತ ಅವರು ಮಾತನಾಡಿ, ವಿಕಸಿತ ಭಾರತ ನಿರ್ಮಾಣಕ್ಕೆ ಪೇಟೆಂಟ್‌ಗಳ ಕುರಿತು ಅರಿವು ಮತ್ತು ತಾಂತ್ರಿಕ ನಾವೀನ್ಯತೆ ಅತ್ಯಗತ್ಯ ಎಂದರು.ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ಕಾನೂನು ಅಧ್ಯಯನ ನಿಕಾಯದ ಡೀನ್ ಪ್ರೊ.ಬಸವರಾಜ ಕುಬಕಡ್ಡಿ, ಕಾರ್ಯಾಗಾರದ ಕುರಿತು ವಿವರಿಸಿ, ವಿದ್ಯಾರ್ಥಿಗಳು ಸಂಶೋಧನೆ ಮತ್ತು ನಾವೀನ್ಯತೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪೇಟೆಂಟ್‌ಗಳ ಮೂಲಕ ತಮ್ಮ ಆವಿಷ್ಕಾರಗಳಿಗೆ ರಕ್ಷಣೆ ಒದಗಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಎರಡು ತಾಂತ್ರಿಕ ಅವಧಿಗಳು ನಡೆದವು. ಮೊದಲ ಅವಧಿಯಲ್ಲಿ ಡಾ. ಕನಿಕಾ ಮಲಿಕ್ ಅವರು ಪೇಟೆಂಟ್ ನೀತಿಶಾಸ್ತ್ರ: ಪೇಟೆಂಟ್ ಕರಡು ರಚನೆ ಮತ್ತು ಸಲ್ಲಿಕೆಯಲ್ಲಿನ ನೈತಿಕ ಪದ್ಧತಿಗಳು ವಿಷಯದ ಕುರಿತು ಮಾತನಾಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ.ಎಂ.ಅಮರೇಂದ್ರ ಮಾಸ್ತ ವಹಿಸಿದ್ದರು. ಭೌತ ವಿಜ್ಞಾನಗಳ ನಿಕಾಯದ ಡೀನ್ ಪ್ರೊ.ರಾಜೀವ್ ಜೋಶಿ ಸಹ–ಅಧ್ಯಕ್ಷರಾಗಿದ್ದರು.

ಎರಡನೇ ಅವಧಿಯಲ್ಲಿ ಮಹಾರಾಷ್ಟ್ರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಅಶೋಕ್ ಪಿ. ವಾಡ್ಜೆ ಅವರು "ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ನೀತಿಶಾಸ್ತ್ರ: ಭಾರತದ ಕಾನೂನು ಚೌಕಟ್ಟು, ಸವಾಲುಗಳು ಮತ್ತು ಉತ್ತಮ ಪದ್ಧತಿಗಳು" ವಿಷಯದ ಕುರಿತು ಉಪನ್ಯಾಸ ನೀಡಿದರು.

ಗಣಕ ವಿಜ್ಞಾನ ನಿಕಾಯದ ಡೀನ್ ಪ್ರೊ.ಆರ್.ಎಸ್. ಹೆಗಡಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.ರಾಸಾಯನಿಕ ವಿಜ್ಞಾನಗಳ ನಿಕಾಯದ ಡೀನ್ ಪ್ರೊ.ಪಲ್ಲೆಪೋಗು ರಾಘವಯ್ಯ ಸಹ–ಅಧ್ಯಕ್ಷರಾಗಿದ್ದರು.

ಕಾರ್ಯಕ್ರಮದ ಸಹ–ಸಂಯೋಜಕಿ ಜುನು ದಾಸ್ ಸೇರಿದಂತೆ ಪ್ರೊ. ಪ್ರಮೋದ್ ಕುಮಾರ್, ಡಾ.ರೇಣುಕಾ ಗುಬ್ಬೇವಾಡ, ಡಾ. ಜಗದೀಶ್ ಚಂದ್ರ, ಡಾ. ವೈಷ್ಣವಿ ನಾರಾಯಣಿ, ಡಾ.ಕೃಷ್ಣಕುಮಾರ್ ಶರ್ಮಾ, ಡಾ.ತಿಲಕಾ, ಡಾ. ಗುರುರಾಜ ಮುಕರಂಬಿ, ಡಾ.ಮಯೂರ್ ಪೂಜಾರ್, ಡಾ.ಜಗದೀಶ್ ಬಿರಾದಾರ, ಡಾ. ಮಲ್ಲಿಕಾರ್ಜುನ ಆನಂದಹಳ್ಳಿ, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಚಿಕ್ಕಮಗಳೂರಿನಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆ ನಡೆಯಿತು.

ಮಕ್ಕಳ ಹೃದಯ ಕಾಯಿಲೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ: ಡಾ.ಗಿರಿ ಸಲಹೆ

ಕಲಬುರಗಿ ನಗರದ ಯಶೋಧಾ ಮೆಡಿಕಲ್ ಸೆಂಟರ್‌ನಲ್ಲಿ ಹೈದರಾಬಾದ ಯಶೋದಾ ಆಸ್ಪತ್ರೆಯ ಖ್ಯಾತ ಮಕ್ಕಳ ಹೃದಯ ತಜ್ಞೆ ಡಾ.ಶತಾಬ್ದಿ ಗಿರಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕಲಬುರಗಿ, ಅ. 25: ಮಕ್ಕಳ ಆರೋಗ್ಯಕರ ಬೆಳವಣಿಗೆ ಮತ್ತು ವಿಕಾಸಕ್ಕೆ ಹೃದಯದ ಆರೋಗ್ಯ ಅತ್ಯಂತ ಮುಖ್ಯವಾಗಿದೆ. ನವಜಾತ ಶಿಶುಗಳಿಂದ ಹಿಡಿದು ಹದಿ ಹರೆಯದವರ ವರೆಗೆ ಮಕ್ಕಳಲ್ಲಿ ಕಂಡುಬರುವ ಹೃದಯ ಕಾಯಿಲೆ ಗಳನ್ನು ಆರಂಭದಲ್ಲೇ ಪತ್ತೆಹಚ್ಚಿ, ಸೂಕ್ತ ಚಿಕಿತ್ಸೆ ನೀಡುವುದರಿಂದ ಅವರು ಸಂಪೂರ್ಣ ಗುಣಮುಖರಾಗ ಬಹುದು ಅಗತ್ಯ ಎಂದು ಹೈದ್ರಾಬಾದ್‌ನ ಯಶೋದಾ ಆಸ್ಪತ್ರೆಯ ಖ್ಯಾತ ಮಕ್ಕಳ ಹೃದಯ ರೋಗ ತಜ್ಞೆ ಡಾ. ಶತಾಬ್ದಿ ಗಿರಿ ಅವರು ಸಲಹೆ ಮಾಡಿದರು.

ನಗರದ ಯಶೋದಾ ಮೆಡಿಕಲ್ ಸೆಂಟರ್‌ನಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ಜನ್ಮಜಾತ ಹೃದಯ ಕಾಯಿಲೆಗಳಾದ ಎಎಸ್‌ಡಿ, ವಿಎಸ್‌ಡಿ, ಪಿಡಿಎ ಹಾಗೂ ಟೆಟ್ರಾಲಜಿ ಆಫ್ ಫಾಲೋಟ್ ಸೇರಿದಂತೆ ವಿವಿಧ ಹೃದಯ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳ ಬಹುದು. ಹೃದಯ ದಲ್ಲಿ ಅಸಹಜ ಧ್ವನಿ ಕೇಳಿಸುವುದು, ನವಜಾತ ಶಿಶು ಗಳಲ್ಲಿ ಹೃದಯದ ತೊಂದರೆ, ರುಮ್ಯಾಟಿಕ್ ಹೃದಯ ಕಾಯಿಲೆ, ಹೃದಯ ಬಡಿತದ ಏರುಪೇರು, ಕಾರ್ಡಿಯೋ ಮಯೋಪತಿ ಹಾಗೂ ಶ್ವಾಸಕೋಶದ ರಕ್ತ ದೊತ್ತಡದ ಸಮಸ್ಯೆಗಳಿಗೂ ಸೂಕ್ತ ತಪಾಸಣೆ ಮತ್ತು ಚಿಕಿತ್ಸೆ ಅಗತ್ಯವಿದೆ ಎಂದರು.

ಮಕ್ಕಳ ಹೃದಯ ರೋಗ ತಪಾಸಣೆ, ಎಕೋಕಾರ್ಡಿಯೋಗ್ರಫಿ, ಇಸಿಜಿ, ಅಗತ್ಯವಿದ್ದ ಲ್ಲಿ ಗರ್ಭದಲ್ಲಿರುವ ಮಗುವಿನ ಹೃದಯದ ಎಕೋ ಪರೀಕ್ಷೆ, ಜನ್ಮಜಾತ ಹೃದಯ ಕಾಯಿಲೆಗಳ ಮೌಲ್ಯಮಾಪನ ಹಾಗೂ ಹೃದಯ ಬಡಿತದ ಏರು ಪೇರುಗಳ ತಪಾಸಣೆ ಸೇರಿದಂತೆ ವಿವಿಧ ಸೇವೆಗಳು ಲಭ್ಯವಿವೆ.

ಅಗತ್ಯವಿರುವ ಮಕ್ಕಳಿಗೆ ಹೃದಯದ ಕ್ಯಾಥೆಟರ್ ಮೂಲಕ ಚಿಕಿತ್ಸೆ, ಸಂಕೀರ್ಣ ಜನ್ಮಜಾತ ಹೃದಯ ಶಸ್ತ್ರಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆಯ ನಂತರದ ನಿರಂತರ ಮೇಲ್ವಿಚಾರಣೆಯೂ ಮುಖ್ಯವಾಗಿದೆ ಎಂದು ಅವರು ಹೇಳಿದರು.

ಖಾಸಗಿ ಆಸ್ತಿ ಅಂಬಾರಿ ಭದ್ರತೆಗೂ ಧಕ್ಕೆ: ರಾಜಮಾತೆ ಪ್ರಮೋದಾದೇವಿ ಅಸಮಾಧಾನ

ಮೈಸೂರು, ಅ.25: ಈ ಬಾರಿಯ ನಾಡಹಬ್ಬ ದಸರಾ ಆಯೋಜನೆಯಲ್ಲಿ ಲೋಪಗಳಾಗಿರುವುದನ್ನು ಖಂಡಿಸಿ ರಾಜವಂಶಸ್ಥೆ ಪ್ರಮೋದಾದೇವಿ ಅಸಮಾಧಾನ ವ್ಯಕ್ತಪಡಿಸಿದ್ದು, ವಿವಿಧ ಇಲಾಖೆಗಳ ಅಧಿಕಾರಿಗಳ ನಡೆ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ಪೊಲೀಸ್ ಇಲಾಖೆ ವಿರುದ್ಧವೂ ಕೂಡ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ರಾಜಮಾತೆ ಪ್ರಮೋದಾದೇವಿ, ವಿವಿಧ ಸರ್ಕಾರಿ ಇಲಾಖೆಗಳ ಸಮನ್ವಯದ ಕೊರತೆ ನಿರಾಸೆ ಮೂಡಿಸಿದೆ ಎಂದು ಹೇಳಿದ್ದಾರೆ. ವಜ್ರಮುಷ್ಠಿ ಕಾಳಗದ ವೇಳೆಯಲ್ಲೂ ಪೊಲೀಸರ ನಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ರಾಜಮಾತೆ ಪ್ರಮೋದಾದೇವಿ, ಈ ಬಾರಿ ಜಟ್ಟಿ ಕಾಳಗ ನಿಲ್ಲಲು ಪೊಲೀಸ್ ಇಲಾಖೆ ಮತ್ತು ಜಟ್ಟಿ ಸಮುದಾಯದ ನಡುವಿನ ಸಮನ್ವಯ ಕೊರತೆಯೇ ಕಾರಣ ಎಂದು ದೂರಿದ್ದಾರೆ. 1970, 1980, 2020ರಲ್ಲಿಯೂ ಜಟ್ಟಿ ಕಾಳಗ ನಿಂತಿತ್ತು. ದಸರಾ ಆಚರಣೆಯ ಭಾಗವಾಗಿ ವಜ್ರಮುಷ್ಠಿ ಕಾಳಗ ನಡೆಸುತ್ತಿಲ್ಲ, ವಜ್ರಮುಷ್ಠಿ ಕಾಳಗಕ್ಕೆ ಧಾರ್ಮಿಕ ಮಹತ್ವ ಇಲ್ಲ ಎಂದು ರಾಜಮಾತೆ ಸ್ಪಷ್ಟನೆ ನೀಡಿದ್ದಾರೆ. ಸಮನ್ವಯ ಕೊರತೆಗೆ ಕಾರಣರಾದ ಪೊಲೀಸ್ ಸಿಬ್ಬಂದಿ ವಿರುದ್ಧ ಮೇಲಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಿ ಎಂದು ಅವರು ಆಗ್ರಹಿಸಿದ್ದಾರೆ.

ಅಂಬಾರಿ ನಮ್ಮ ಖಾಸಗಿ ಆಸ್ತಿಯೇ ಹೊರತು ಸರ್ಕಾರದ್ದಲ್ಲ ಇದೇ ವೇಳೇ ಚಿನ್ನದ ಅಂಬಾರಿ ವಿಷಯದಲ್ಲಿ ಪೊಲೀಸರ ನಿರ್ಲಕ್ಷ್ಯಕ್ಕೆ ಕಿಡಿಕಾರಿರುವ ಪ್ರಮೋದಾದೇವಿ ಒಡೆಯರ್, ಪೊಲೀಸ್ ಆಯುಕ್ತರು ನೀಡಿದ ಭರವಸೆ ಮೇರೆಗೆ ಅಂಬಾರಿ ನೀಡಲಾಗಿತ್ತು. ಆಯುಕ್ತರು ನೀಡಿದ್ದ ಭರವಸೆ ಉಳಿಸಿಕೊಂಡಿಲ್ಲ, ಅಂಬಾರಿ ಸುತ್ತಮುತ್ತ ಅನಧಿಕೃತ ವ್ಯಕ್ತಿಗಳು ಓಡಾಡುತ್ತಿದ್ದರು. ಅಂಬಾರಿ ನಮ್ಮ ಖಾಸಗಿ ಆಸ್ತಿಯೇ ಹೊರತು ಸರ್ಕಾರದ ಆಸ್ತಿ ಅಲ್ಲ, ಅಂಬಾರಿ ಬಳಿ ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬಸ್ಥರಿದ್ದರು. ಸೆಲ್ಫಿ ತೆಗೆದುಕೊಳ್ಳುವ ನೆಪದಲ್ಲಿ ಅಂಬಾರಿ ಬಳಿ ಇದ್ದರು, ಅಂಬಾರಿ ಭದ್ರತೆಗೆ ಧಕ್ಕೆ ಉಂಟು ಮಾಡಿರುವುದು ಸರಿಯಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ. ಪೊಲೀಸ್ ಇಲಾಖೆ ವಿರುದ್ಧವೂ ಅಸಮಾಧಾನ ಹೊರಹಾಕಿರುವ ಪ್ರಮೋದಾದೇವಿ, ನಮ್ಮ ಅತಿಥಿಗಳಿಗಾಗಿ ಇರಿಸಿದ್ದ ಖಾಸಗಿ ಸ್ಥಳ ಅತಿಕ್ರಮಣ ಮಾಡಿಕೊಂಡಿದ್ದರು. ಅನಧಿಕೃತ ತಡೆ ಹಾಕಿ ಧಾರ್ಮಿಕ ಕಾರ್ಯಗಳಿಗೆ ಅಡ್ಡಿ ಮಾಡಿದರು ಎಂದು ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ವಿರುದ್ಧ ನೇರ ಆರೋಪ ಮಾಡಿದ್ದಾರೆನಮ್ಮ ಧಾರ್ಮಿಕ ಕಾರ್ಯಗಳಿಗೆ ಅಡ್ಡಿ ಉಂಟು ಮಾಡುತ್ತಿದ್ದಾರೆ. ಸರ್ಕಾರಿ ದಸರಾಗೆ ಯಾವುದೇ ಮಹತ್ವ ಇಲ್ಲ, ನವರಾತ್ರಿ ಆಚರಣೆಯಲ್ಲಿ ನಮ್ಮ ಧಾರ್ಮಿಕ ಕಾರ್ಯಗಳಿಗೆ ಅಡ್ಡಿ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಉಚ್ಚ ನ್ಯಾಯಾಲಯ ಸಂಪರ್ಕಿಸಲು ನಾವು ಸ್ವತಂತ್ರರು ನಮ್ಮ ಆಚರಣೆಗಳಿಗೆ ಸರ್ಕಾರಿ ಅಧಿಕಾರಿಗಳಿಂದ ಅಡ್ಡಿ ಆಗ್ತಿದೆ. ಈ ಕುರಿತು ಉಚ್ಚ ನ್ಯಾಯಾಲಯ ಸಂಪರ್ಕಿಸಲು ನಾವು ಸ್ವತಂತ್ರರು, ನ್ಯಾಯಾಲಯ ಸ್ಪಷ್ಟ ಆದೇಶ ನೀಡಿದೆ. ಆದರೆ, ನಾವು ಪ್ರತಿ ವರ್ಷ ಅಂತಹ ಕ್ರಮಕೈಗೊಳ್ಳದೆ ದೂರ ಉಳಿದಿದ್ದೇವೆ. ಮೊದಲ ದಿನದಿಂದ ಏಳು ದಿನದವರೆಗೆ ಸರ್ಕಾರಿ ಕಾರ್ಯಕ್ರಮ ನಡೆಯ ಬಹುದು. ಆಯುಧಪೂಜೆ, ವಿಜಯದಶಮಿಗೆ ನಮಗೆ ಅವಕಾಶ ನೀಡಬೇಕು ಎಂದು ನ್ಯಾಯಾಲಯದ ಆದೇಶ ಕುರಿತು ರಾಜಮಾತೆ ಪ್ರಮೋದಾದೇವಿ ಒಡೆಯರ್ ಎಚ್ಚರಿಸಿದ್ದಾರೆ.

ನ.7ರಂದು ಬೀದರ್ ಪ್ರಥಮ ದಲಿತ ಬಂಡಾಯ ಸಾಹಿತ್ಯ ಸಮ್ಮೇಳನ

ಬೀದರ್, ಅ. 25: ಬೀದರ್ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜಿಲ್ಲಾ ಪ್ರಥಮ ದಲಿತ ಬಂಡಾಯ ಸಾಹಿತ್ಯ ಸಮ್ಮೇಳನ ನವೆಂಬರ್ 7ರಂದು ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ನಗರದ ಕನ್ನಡ ಭವನದಲ್ಲಿ ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ತಿಳಿಸಿದರು.

ಕನ್ನಡದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಸಾಮಾಜಿಕ ನ್ಯಾಯದ ಆಶಯದೊಂದಿಗೆ ದಲಿತ–ಬಂಡಾಯ, ವಚನ ಸಾಹಿತ್ಯ, ದಾಸ ಸಾಹಿತ್ಯ ಸೇರಿದಂತೆ ನಾಡು–ನುಡಿ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಸಮ್ಮೇಳನಗಳನ್ನು ಆಯೋಜಿಸುತ್ತಿದೆ. ಅದರ ಭಾಗವಾಗಿ ಬೀದರ್ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ದಲಿತ ಬಂಡಾಯ ಸಮ್ಮೇಳನ ಆಯೋಜಿಸಲಾಗುತ್ತಿದೆ.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಹೋರಾಟಗಾರ ಮಾರುತಿ ಬೌದ್ಧೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷರ ವಿರುದ್ಧ ಕ್ರಮಕ್ಕೆ ಸಾರ್ವಜನಿಕರ ಒತ್ತಾಯ

ಹಿಂದೂ ಸಂಪ್ರದಾಯದ ಭಾವನೆಗಳಿಗೆ ದಕ್ಕೆ: ಪುರಾತನ ಶಿಲಾಸ್ತಂಭಗಳ ಸಂರಕ್ಷಣೆ ಕುರಿತು ಅಧಿಕಾರಿಗಳು ತಕ್ಷಣ ಪರಿಶೀಲನೆ ನಡೆಸಲಿ

ಬಳ್ಳಾರಿ, ಅ 25. ಜಿಲ್ಲಾ ಲಾರಿ ಮಾಲೀಕರ ಸಂಘದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳ ನೇಮಕಾತಿ ಮತ್ತು ಸಂಘದ ಆಡಳಿತಕ್ಕೆ ಸಂಬಂಧಿಸಿದಂತೆ ಗೊಂದಲಗಳು ಮುಂದುವರಿದಿವೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಸಂಘದ ವಿಚಾರಗಳು ಈಗಾಗಲೇ ಹಲವು ವಿವಾದಗಳಿಗೆ ಕಾರಣವಾಗಿ ನ್ಯಾಯಾಲಯದ ಮೆಟ್ಟಿಲೇರಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಸಂಘದ ಅಧಿಕೃತ ಪದಾಧಿಕಾರಿಗಳು ಯಾರು ಎಂಬುದರ ಕುರಿತು ಸ್ಪಷ್ಟತೆ ಅಗತ್ಯವಾಗಿದೆ.

ಒಂದು ಬಣ ತಾವೇ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಎಂದು ಹೇಳಿಕೊಳ್ಳುತ್ತಿದ್ದರೆ, ಮತ್ತೊಂದು ಬಣ ಸಂಬಂಧಪಟ್ಟ ಜಿಲ್ಲಾ ನೋಂದಣಿ ಅಥವಾ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿರುವುದಾಗಿ ತಿಳಿದುಬಂದಿದೆ.

ಇದರ ನಡುವೆ, ಲಾರಿ ಮಾಲೀಕರ ಸಂಘದ ಕಚೇರಿ ಮುಂಭಾಗದಲ್ಲಿರುವ ಖಾಲಿ ಜಾಗದಲ್ಲಿ ಪುರಾತನ ದೇವಾಲಯಕ್ಕೆ ಸಂಬಂಧಿಸಿರಬಹುದಾದ "ಕಲ್ಲಿನ ಶಿಲಾಸ್ತಂಭಗಳು ಹಾಗೂ ಕೆತ್ತನೆಗಳನ್ನು ಹೊಂದಿರುವ ಕೆಲವು ಸ್ತಂಭಗಳನ್ನು ಸಾರ್ವಜನಿಕರು ಸಂಚರಿಸುವ ಪ್ರದೇಶದಲ್ಲಿ ಇರಿಸಲಾಗಿದೆ ಎಂಬ ಆಕ್ಷೇಪಗಳು ವ್ಯಕ್ತವಾಗಿವೆ.

ಈ ಸ್ತಂಭಗಳು ಪುರಾತನವಾಗಿದ್ದು, ಕೆಲವು ಹಾನಿಗೊಳಗಾದ ಸ್ಥಿತಿಯಲ್ಲಿವೆ ಎನ್ನಲಾಗುತ್ತಿದೆ.

ಅವುಗಳ ಮೂಲ, ಐತಿಹಾಸಿಕ ಮಹತ್ವ ಮತ್ತು ಪ್ರಸ್ತುತ ಸ್ಥಿತಿಯ ಬಗ್ಗೆ ಸಂಬಂಧಪಟ್ಟ ಪುರಾತತ್ವ ಹಾಗೂ ಧಾರ್ಮಿಕ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸುವುದು ಅಗತ್ಯವಾಗಿದೆ.

ಸಾಮಾನ್ಯವಾಗಿ ದೇವಾಲಯಗಳ ಜೀರ್ಣೋದ್ಧಾರ ಅಥವಾ ಅಭಿವೃದ್ಧಿ ಕಾಮಗಾರಿಗಳ ಸಂದರ್ಭದಲ್ಲಿ ಪುರಾತನ ಶಿಲಾಸ್ತಂಭಗಳು ಹಾಗೂ ಮೂರ್ತಿಗಳು ಪತ್ತೆಯಾದರೆ, ಅವುಗಳ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವವನ್ನು ಪರಿಗಣಿಸಿ, ಸಂಬಂಧಪಟ್ಟ ತಜ್ಞರ ಮಾರ್ಗದರ್ಶನದಲ್ಲಿ ಸುರಕ್ಷಿತವಾಗಿ ಸಂರಕ್ಷಿಸುವುದು ಅಗತ್ಯ. ಆದರೆ, ಬಳ್ಳಾರಿ ಜಿಲ್ಲಾ ಲಾರಿ ಮಾಲೀಕರ ಸಂಘದ ಕಚೇರಿ ಆವರಣದಲ್ಲಿ ಇಂತಹ ಶಿಲಾಸ್ತಂಭಗಳನ್ನು ಅಡ್ಡಗೋಡೆಯಂತೆ ಬಳಸಿ ಜಾಗದ ಗಡಿ ನಿರ್ಮಿಸಲಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದು, ಈ ಕುರಿತು ನಿಷ್ಪಕ್ಷಪಾತ ತನ

ಇರಾನ್ ಮೇಲೆ ಇಂದು ದಾಳಿ ಇಲ್ಲ: ಟ್ರಂಪ್

ಟೆಹ್ರಾನ್‌ನಲ್ಲಿ ಕತಾರ್ ಮಧ್ಯವರ್ತಿಗಳು

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಇರಾನ್ ಮೇಲೆ ದಾಳಿ ನಡೆಸುವ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ಮಿಚಿಗನ್‌ಗೆ ತೆರಳಲು ವೈಟ್ ಹೌಸ್‌ನಿಂದ ಹೊರಡುವಾಗ, ಅಮೆರಿಕದ ದಾಳಿಗಳು ಇಂದೇ ಪುನರಾರಂಭಗೊಳ್ಳಬಹುದೇ ಎಂದು ಕೇಳಲಾದ ಪ್ರಶ್ನೆಗೆ, "ಇಲ್ಲ, ಇಂದು ಯಾವುದೇ ದಾಳಿ ನಡೆಯುವುದಿಲ್ಲ" ಎಂದು ಟ್ರಂಪ್ ಉತ್ತರಿಸಿದರು. ಇದಕ್ಕೂ ಮುನ್ನ, ವಾಷಿಂಗ್ಟನ್ ಈ "ಕೆಲಸವನ್ನು ಪೂರ್ಣಗೊಳಿಸಬೇಕಾಗಬಹುದು" ಅಥವಾ ಟೆಹ್ರಾನ್‌ನೊಂದಿಗೆ ಒಪ್ಪಂದಕ್ಕೆ ಬರಬಹುದು ಎಂದು ಅವರು ಸುಳಿವು ನೀಡಿದ್ದರು. ಕತಾರ್‌ನ ನಿಯೋಗವೊಂದು ಭಾನುವಾರ ಟೆಹ್ರಾನ್‌ಗೆ ಆಗಮಿಸಿದೆ ಎಂದು ಇರಾನ್‌ನ ಹಿರಿಯ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ. ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ತಗ್ಗಿಸಲು ಅಮೆರಿಕದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರಯತ್ನದ ಭಾಗವಾಗಿ ಕತಾರ್‌ನ ಮಧ್ಯವರ್ತಿಗಳು ಟೆಹ್ರಾನ್‌ನಲ್ಲಿದ್ದಾರೆ. "ರಾಜತಾಂತ್ರಿಕ ಪರಿಹಾರಕ್ಕೆ ಮುಖ್ಯ ಅಡಚಣೆಯೆಂದರೆ ಮಧ್ಯಸ್ಥಿಕೆ ಅಲ್ಲ; ಬದಲಾಗಿ, ಇರಾನ್‌ನ ನ್ಯಾಯಯುತ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಅಮೆರಿಕ ನಿರಾಕರಿಸುತ್ತಿರುವುದು ಮತ್ತು ಅದು ಪದೇ ಪದೇ ತನ್ನ ಭರವಸೆಗಳಿಂದ ಹಿಂದೆ ಸರಿಯುತ್ತಿರುವುದು," ಎಂದು ಆ ಅಧಿಕಾರಿ ಹೇಳಿದರು. ಇದಕ್ಕೂ ಮೊದಲು, ವಾಷಿಂಗ್ಟನ್ ಇರಾನ್ ಮೇಲೆ ದಾಳಿ ನಡೆಸಬಹುದು ಅಥವಾ ಟೆಹ್ರಾನ್‌ನೊಂದಿಗೆ ಒಂದು "ದೊಡ್ಡ, ಅತ್ಯುತ್ತಮ" ಒಪ್ಪಂದಕ್ಕೆ ಬರಬಹುದು ಎಂದು ಟ್ರಂಪ್ ಹೇಳಿದ್ದರು. ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಇರಾನ್ ಮತ್ತಷ್ಟು ಮಿಲಿಟರಿ ಕ್ರಮವನ್ನು ತಪ್ಪಿಸಬಹುದು ಎಂದು ಟ್ರಂಪ್ ಸೂಚಿಸಿದರು. "ಅವರು ಒಪ್ಪಂದ ಮಾಡಿಕೊಳ್ಳಲು ಬಯಸುತ್ತಾರೆ, ಆದರೆ ಪ್ರಶ್ನೆಯೇನೆಂದರೆ, ಅವರು ಅದಕ್ಕೆ ಬದ್ಧರಾಗಿರುತ್ತಾರೆಯೇ?" ಎಂದು ಟ್ರಂಪ್ ಪ್ರಶ್ನಿಸಿದರು. ಇರಾನ್ ಎಂದಿಗೂ ಪರಮಾಣು ಶಸ್ತ್ರಾಸ್ತ್ರಗಳನ್ನು ಪಡೆಯದಂತೆ ತಡೆಯುವುದೇ ತಮ್ಮ ಉದ್ದೇಶ ಎಂದು ಅವರು ಹೇಳಿದರು. ಈ ಹಿಂದೆ ಬಿ-2 (ಃ-2) ಬಾಂಬರ್ ವಿಮಾನಗಳನ್ನು ಬಳಸಿಕೊಂಡು ಅಮೆರಿಕ ನಡೆಸಿದ ಕಾರ್ಯಾಚರಣೆಯು ಶಾಶ್ವತ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಕಾಗಿತ್ತು ಎಂದು ಅವರು ಉಲ್ಲೇಖಿಸಿದರು.

ಇರಾನ್‌ನಲ್ಲಿ ಹಣದುಬ್ಬರ ದರ ಶೇ. 301 ರಷ್ಟಿದೆ: ಟ್ರಂಪ್

ಇರಾನ್‌ನಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ಉಲ್ಲೇಖಿಸಿದ ಅಮೆರಿಕ ಅಧ್ಯಕ್ಷರು, ಆ ಇಸ್ಲಾಮಿಕ್ ಗಣರಾಜ್ಯವು ಹಣದುಬ್ಬರದ ವಿಷಯದಲ್ಲಿ "ದಾಖಲೆಗಳನ್ನು ಸೃಷ್ಟಿಸುತ್ತಿದೆ" ಎಂದು ಹೇಳಿದರು. ಶನಿವಾರ ಬೆಳಗಿನ ವೇಳೆಗೆ ಟೆಹ್ರಾನ್‌ನಲ್ಲಿ ಹಣದುಬ್ಬರ ದರವು ಶೇ. 301 ಕ್ಕೆ ತಲುಪಿದೆ ಎಂದು ಅವರು ಪ್ರತಿಪಾದಿಸಿದರು. ಆದಾಗ್ಯೂ, ಇರಾನ್‌ನ ಅಂಕಿಅಂಶ ಕೇಂದ್ರದ (Statistical Center of Iran) ದತ್ತಾಂಶವನ್ನು ಆಧರಿಸಿ ರಾಯಿಟರ್ಸ್ ಈ ಹಿಂದೆ ಪ್ರಕಟಿಸಿದ ವರದಿಯ ಪ್ರಕಾರ, ಸೆಪ್ಟೆಂಬರ್‌ನಲ್ಲಿ ಇರಾನ್‌ನ ವಾರ್ಷಿಕ ಹಣದುಬ್ಬರ ದರವು ಶೇ. 73.6 ರಷ್ಟಿತ್ತು. ಇದಲ್ಲದೆ, ಜುಲೈನಲ್ಲಿ ವಾಷಿಂಗ್ಟನ್ ತನ್ನ ನೌಕಾ ದಿಗ್ಬಂಧನವನ್ನು ಮರುಸ್ಥಾಪಿಸಿದ ನಂತರ, ಅಮೆರಿಕ ಡಾಲರ್ ಎದುರು ಇರಾನ್‌ನ ಕರೆನ್ಸಿಯಾದ 'ರಿಯಾಲ್' ಮೌಲ್ಯವು ಸುಮಾರು ಶೇ. 35 ರಷ್ಟು ಕುಸಿದಿದೆ.

ಅಮೆರಿಕದಿಂದ ಹೊಸ ದಾಳಿ ನಡೆದರೂ ಟೆಹ್ರಾನ್‌ನ ನಿಲುವಿನಲ್ಲಿ ಬದಲಾವಣೆ ಇರುವುದಿಲ್ಲ: ಇರಾನ್

ಇಸ್ರೇಲ್ ಮತ್ತು ಅಮೆರಿಕದೊಂದಿಗೆ ಯುದ್ಧವು ಮತ್ತೆ ಭುಗಿಲೆದ್ದರೂ, ತಮ್ಮ ದೇಶದ ನಿಲುವಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಭಾನುವಾರ ಹೇಳಿದ್ದಾರೆ. ಟೆಹ್ರಾನ್ ಮತ್ತು ವಾಷಿಂಗ್ಟನ್ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಹೇಳಿಕೆ ಬಂದಿದೆ. ಫೆಬ್ರವರಿ 28 ರಂದು ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸಿದಕಾರ್ಯಾಚರಣೆಯನ್ನು ಉಲ್ಲೇಖಿಸಿ, ಅಮೆರಿಕವು "ಮತ್ತೊಂದು ಸಣ್ಣ 'ಎಪಿಕ್ ಫ್ಯೂರಿ' ಕಾರ್ಯಾಚರಣೆಯನ್ನು ನಡೆಸಬಹುದು" ಎಂದು ಅಧ್ಯಕ್ಷ ಟ್ರಂಪ್ ಶುಕ್ರವಾರ ಹೇಳಿದ್ದರು. ಟೆಹ್ರಾನ್ ಮತ್ತು ವಾಷಿಂಗ್ಟನ್ ನಡುವಿನ ಉದ್ವಿಗ್ನತೆ ಹೆಚ್ಚುತ್ತಿರುವ ಬೆನ್ನಲ್ಲೇ, ಪರ್ಷಿಯನ್ ಕೊಲ್ಲಿಯಲ್ಲಿ ಅಮೆರಿಕದ ನೌಕೆಗಳನ್ನು "ಯಾವುದೇ ಕಾರಣಕ್ಕೂ" ಪ್ರವೇಶಿಸಲು ಬಿಡುವುದಿಲ್ಲ ಎಂದು ಇರಾನ್ ಶನಿವಾರ ಎಚ್ಚರಿಕೆ ನೀಡಿದೆ. ರಡೂ ಕಡೆಯವರು ಮತ್ತೆ ದಾಳಿಗಳನ್ನು ನಡೆಸುವ ಸುಳಿವು ನೀಡಿದ್ದು, ಟರ್ಕಿಯಲ್ಲಿರುವ ಅಮೆರಿಕದ ರಾಯಭಾರಿ, ಈ ವಾರಾಂತ್ಯದಲ್ಲೇ ಇರಾನ್ ಮೇಲೆ ದಾಳಿ ನಡೆಯಬಹುದು ಎಂದು ಎಚ್ಚರಿಸಿದ್ದಾರೆ.

2047ರ ವೇಳೆಗೆ ಭಾರತವು ತನ್ನ ಬಂದರು ಸಾಮರ್ಥ್ಯವನ್ನು ನಾಲ್ಕು ಪಟ್ಟು ಹೆಚ್ಚಿಸಲಿದೆ

ಹೊಸ ದೆಹಲಿ, ಅ.25: ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು 2047 ರ ವೇಳೆಗೆ ಭಾರತದ ಬಂದರು ಸಾಮರ್ಥ್ಯವನ್ನು ನಾಲ್ಕು ಪಟ್ಟು ಹೆಚ್ಚಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಘೋಷಿಸಿದರು, ಮತ್ತು ರೋಟರ್ಡ್ಯಾಮ್ ಬಂದರಿನೊಂದಿಗೆ ಸಹಕರಿಸುವ ಅವಕಾಶಗಳಿಗೆ ಒತ್ತು ನೀಡಿದರು.

ನೆದರ್ಲ್ಯಾಂಡ್ಸ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಭಾರತದ ಬೆಳೆಯುತ್ತಿರುವ ಆರ್ಥಿಕತೆ ಮತ್ತು ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಆಧುನಿಕ ಬಂದರು ಮೂಲಸೌಕರ್ಯದಲ್ಲಿ ಗಣನೀಯ ಹೂಡಿಕೆಯ ಅಗತ್ಯವಿದೆ ಎಂದು ಗೋಯಲ್ ತಿಳಿಸಿದರು. ಕಳೆದ ದಶಕದಲ್ಲಿ ನಮ್ಮ ಬಂದರು ಸಾಮರ್ಥ್ಯವನ್ನು ದ್ವಿಗುಣಗೊಳಿಸಿದ್ದರೂ, ಭಾರತಕ್ಕೆ ಇನ್ನೂ ಹೆಚ್ಚಿನ ಅಗತ್ಯವಿದೆ. ನಮ್ಮ ಜಿಡಿಪಿ ಬೆಳವಣಿಗೆ ಮತ್ತು ಜಾಗತಿಕ ವ್ಯಾಪಾರವನ್ನು ಬೆಂಬಲಿಸಲು 2047 ರ ವೇಳೆಗೆ ನಾವು ಇದನ್ನು ಮತ್ತಷ್ಟು ಎರಡು ಪಟ್ಟು ಹೆಚ್ಚಿಸುವ ಗುರಿ ಹೊಂದಿದ್ದೇವೆ? ಎಂದು ಗೋಯಲ್ ಹೇಳಿದ್ದಾರೆ. ವಿಶ್ವ ದರ್ಜೆಯ ಬಂದರು ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವಲ್ಲಿ ರೋಟರ್ಡ್ಯಾಮ್ನ ಪರಿಣತಿಯಿಂದ ಭಾರತವು ಪ್ರಯೋಜನ ಪಡೆಯಬಹುದು ಎಂದು ಅವರು ಒತ್ತಿ ಹೇಳಿದರು. ಸಮುದ್ರ ಮೂಲಸೌಕರ್ಯ, ಹಸಿರು ಇಂಧನ ಮತ್ತು ಇಂಗಾಲದ ಸೆರೆಹಿಡಿಯುವಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ರೋಟರ್ಡ್ಯಾಮ್ನೊಂದಿಗೆ ಸಹಕಾರವನ್ನು ಕಲ್ಪಿಸಲಾಗಿದೆ. ಸುಸ್ಥಿರ ಕಡಲ ಅಭಿವೃದ್ಧಿಯ ಪ್ರಾಮುಖ್ಯತೆಯನ್ನು ಗೋಯಲ್ ಎತ್ತಿ ತೋರಿಸಿದರು, ಇದು ಪರಿಸರ ಪ್ರಯೋಜನಗಳನ್ನು ಮತ್ತು ಹಸಿರು ಇಂಧನ ವ್ಯಾಪಾರಕ್ಕೆ ಹೊಸ ಮಾರ್ಗಗಳನ್ನು ಒದಗಿಸುತ್ತದೆ. ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆಯಾಗಿದೆ ಎಂದು ವರ್ಣಿಸಿದ ಗೋಯಲ್, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ರಾಷ್ಟ್ರದ ಕಡಲ ಮಹತ್ವಾಕಾಂಕ್ಷೆಗಳ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಬಂದರು ಮೂಲಸೌಕರ್ಯ ಮತ್ತು ಸಂಪರ್ಕವನ್ನು ಈಗಾಗಲೇ ಸುಧಾರಿಸುತ್ತಿರುವ 'ಸಾಗರಮಾಲಾ' ಉಪಕ್ರಮವನ್ನು ಅವರು ಉಲ್ಲೇಖಿಸಿದರು. ಇದಲ್ಲದೆ, ಜಾಗತಿಕ ಶಿಪ್ಪಿಂಗ್ ಉದ್ಯಮಕ್ಕಾಗಿ ನುರಿತ ನಾವಿಕರಿಗೆ ತರಬೇತಿ ನೀಡಲು ತಮ್ಮ ಮುಂಬೈ ಕ್ಷೇತ್ರಾಡಿದಲ್ಲಿ ಪ್ರಮುಖ ಕಡಲ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಗಳನ್ನು ಗೋಯಲ್ ಪ್ರಸ್ತಾಪಿಸಿದರು. ಈ ಕಾರ್ಯತಂತ್ರದ ತಳ್ಳುವಿಕೆಯು ಜಾಗತಿಕ ಕಡಲ ವ್ಯಾಪಾರದಲ್ಲಿ ಭಾರತದ ಸ್ಥಾನವನ್ನು ಗಟ್ಟಿಗೊಳಿಸುವ ಗುರಿಯನ್ನು ಹೊಂದಿದೆ.

ಉಕ್ರೇನ್ ಮೇಲಿನ ರಷ್ಯಾ ದಾಳಿಗೆ ಅಧ್ಯಕ್ಷ ಝೆಲೆನ್ಸ್ಕಿ ಖಂಡನೆ

ಮೂಲಸೌಕರ್ಯಗಳಿಗೆ ಹಾನಿ, ಭಾರಿ ಜೀವಹಾನಿ: ಆಕ್ರೋಶ

ಕೀವ್ [ಉಕ್ರೇನ್], ಅಕ್ಟೋಬರ್ 25: ಉಕ್ರೇನ್ ಮೇಲಿನ ಇತ್ತೀಚಿನ ರಷ್ಯಾದ ದಾಳಿಗಳನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಭಾನುವಾರದಂದು ತೀವ್ರವಾಗಿ ಖಂಡಿಸಿದ್ದಾರೆ. ಈ ದಾಳಿಗಳಲ್ಲಿ ಹಲವಾರು ಜೀವಗಳುಹಾನಿಯಾಗಿವೆ, ಅನೇಕರು ಗಾಯಗೊಂಡಿದ್ದಾರೆ ಮತ್ತು ಮೂಲಸೌಕರ್ಯಗಳಿಗೆ ಭಾರೀ ಹಾನಿಯಾಗಿದೆ ಎಂದು ಅವರು ತಿಳಿಸಿದ್ದಾರೆ. ಚಳಿಗಾಲದ ಮುನ್ನ ವಾಯು ರಕ್ಷಣಾ ಸಾಮರ್ಥ್ಯಗಳನ್ನು, ವಿಶೇಷವಾಗಿ ಪೇಟ್ರಿಯಾಟ್ ತಡೆಹಿಡಿಯುವ ಕ್ಷಿಪಣಿಗಳ ಪೂರೈಕೆಯನ್ನು ತ್ವರಿತಗೊಳಿಸುವಂತೆ ಅವರು ಮತ್ತೊಮ್ಮೆ ಒತ್ತಾಯಿಸಿದ್ದಾರೆ. ಎಕ್ಸ್ (ಖಿ) ನಲ್ಲಿ ಪೋಸ್ಟ್ ಮಾಡಿರುವ ಉಕ್ರೇನ್ ಅಧ್ಯಕ್ಷರು, ಕೇವಲ ಕಳೆದ ವಾರದಲ್ಲಿಯೇ ರಷ್ಯಾದ ವಾಯುಪಡೆಯು ಉಕ್ರೇನ್ ಭೂಪ್ರದೇಶದ ಮೇಲೆ ಸುಮಾರು 1,600 ಮಾರ್ಗದರ್ಶಿತ ವೈಮಾನಿಕ ಬಾಂಬುಗಳು, 48 ಕ್ಷಿಪಣಿಗಳು ಮತ್ತು ಸುಮಾರು 2,300 ದಾಳಿ ಡ್ರೋನ್ಗಳನ್ನು ಬಳಸಿ ದಾಳಿ ನಡೆಸಿದೆ ಎಂದು ತಿಳಿಸಿದ್ದಾರೆ. ಇದು ಜೀವಹಾನಿ ಮತ್ತು ಮೂಲಸೌಕರ್ಯಗಳ ನಾಶಕ್ಕೆ ಕಾರಣವಾಗಿದೆ. ದ್ನಿಪ್ರೊದಲ್ಲಿ ನಡೆದ ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು ಮಕ್ಕಳು ಸೇರಿದಂತೆ 22 ಜನರು ಗಾಯಗೊಂಡಿದ್ದಾರೆ. ವಿನ್ನೈತ್ಸಿಯಾದಲ್ಲಿ ಅಪಾರ್ಟ್‌ಮೆಂಟ್ ಮೇಲೆ ರಷ್ಯಾದ ಡ್ರೋನ್ ದಾಳಿಯಿಂದ ಆರು ಜನರು ಗಾಯಗೊಂಡಿದ್ದಾರೆ. ಹಾರ್ಕಿವ್ನಲ್ಲಿ ನಡೆದ ಹಲವು ರಷ್ಯಾದ ದಾಳಿಗಳು ರಕ್ಷಣಾ ಕಾರ್ಯಕರ್ತರು ಸಹ ಗಾಯಗೊಳ್ಳುವಂತೆ ಮಾಡಿದೆ ಎಂದು ಅವರು ವಿವರಿಸಿದರು. "ಕೇವಲ ಕಳೆದ ವಾರದಲ್ಲಿಯೇ, ರಷ್ಯಾದ ಉಕ್ರೇನ್ ವಿರುದ್ಧ ಸುಮಾರು 1,600 ಮಾರ್ಗದರ್ಶಿತ ವೈಮಾನಿಕ ಬಾಂಬುಗಳು, ಬ್ಯಾಲಿಸ್ಟಿಕ್ ಕ್ಷಿಪಣಿಗಳು ಸೇರಿದಂತೆ ವಿವಿಧ ರೀತಿಯ 48 ಕ್ಷಿಪಣಿಗಳು ಮತ್ತು ಸುಮಾರು 2,300 ದಾಳಿ ಡ್ರೋನ್‌ಗಳನ್ನು ಪ್ರಯೋಗಿಸಿದೆ. ದುರದೃಷ್ಟವಶಾತ್, ಬಹುತೇಕ ಪ್ರತಿದಿನ ಈ ಕ್ರೂರ ದಾಳಿಗಳು ಜನರನ್ನು ಬಲಿ ತೆಗೆದುಕೊಳ್ಳುತ್ತಿವೆ ಮತ್ತು ಗಾಯಗೊಳಿಸುತ್ತಿವೆ. ಸಂಜೆ, ದ್ನಿಪ್ರೊ ಪ್ರದೇಶದ ಮೇಲಿನ ರಷ್ಯಾದ ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ. ಅವರ ಕುಟುಂಬಗಳಿಗೆ ನನ್ನ ಸಂತಾಪಗಳು. 11 ವರ್ಷದ ಬಾಲಕಿ ಸೇರಿದಂತೆ ಮತ್ತೊಂದು 22 ಜನರು ಗಾಯಗೊಂಡಿದ್ದಾರೆ. ವಿನ್ನೈತ್ಸಿಯಾದಲ್ಲಿ, ರಷ್ಯಾದ ಡ್ರೋನ್ ಬಹು ಮಹಡಿ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ಅಪ್ಪಳಿಸಿತು. ಆರು ಜನರು ಗಾಯಗೊಂಡಿದ್ದಾರೆ. ಹಾರ್ಕಿವ್‌ಬಲ್ಲಿ, ರಷ್ಯಾದವರು ಮೊದಲು ಮನೆಯ ಸುಧಾರಣಾ ಹೈಪರ್ ಮಾರ್ಕೆಟ್‌ಗೆ ಹೊಡೆದರು ಮತ್ತು ನಂತರ ಸ್ಥಳಕ್ಕೆ ಆಗಮಿಸಿದ ತುರ್ತು ಸೇವೆಗಳ ಮೇಲೆ ಎರಡನೇ ಹಂತದ ಸಿಚಿನಿಕ ದಾಳಿ ನಡೆಸಿದರು. ಪರಿಣಾಮ ಪ್ರಥಮ ಚಿಕಿತ್ಸಾ ಸಿಬ್ಬಂದಿ ಗಾಯಗೊಂಡಿದ್ದಾರೆ" ಎಂದು ಝೆಲೆನ್ಸ್ಕಿ ಬರೆದಿದ್ದಾರೆ. ಈ ದಾಳಿಗಳಿಂದ ಆಗಿರುವ ಹಾನಿಯ ವ್ಯಾಪ್ತಿಯನ್ನು ಎತ್ತಿ ತೋರಿಸಿರುವ ಝೆಲೆನ್ಸ್ಕಿ, "ರಾತ್ರಿಯ ವೇಳೆ ಉಷ್ಣ ವಿದ್ಯುತ್ ಸ್ಥಾವರ, ಉಪಕೇಂದ್ರ, ಕಲ್ಲಿದ್ದಲು ಗಣಿಗಳು, ಧಾನ್ಯ ಸಂಗ್ರಹಣಾ ಘಟಕಗಳು, ಶಾಪಿಂಗ್ ಮಾಲ್ಗಳು ಮತ್ತು ಪೋಸ್ಟಲ್ ಲಾಜಿಸ್ಟಿಕ್ಸ್ ಹಬ್‌ಗಳ ಮೇಲೆ ದಾಳಿಗಳು ನಡೆದಿವೆ. ಒಂಬತ್ತು ಪ್ರದೇಶಗಳಲ್ಲಿ ಹಾನಿ ಸಂಭವಿಸಿರುವುದು ವರದಿಯಾಗಿದೆ" ಎಂದು ತಿಳಿಸಿದರು. ರಷ್ಯಾದ ಈ ಕ್ರಮಗಳನ್ನು ಪ್ರತ್ಯೇಕತೆಯಿಂದ ಹೊರಬರುವ ಪ್ರಯತ್ನಗಳಿಗೆ" ಆ ದೇಶ ನೀಡುತ್ತಿರುವ ಪ್ರತಿಕ್ರಿಯೆ ಎಂದು ಬಣ್ಣಿಸಿರುವ ಝೆಲೆನ್ಸ್ಕಿ, ಜೆಟ್ ಚಾಲಿತ 'ಶಾಹೇದ್' ಮತ್ತು ಪೇಟ್ರಿಯಾಟ್ ತಡೆಹಿಡಿಯುವ ಕ್ಷಿಪಣಿಗಳ ವಿರುದ್ಧ ಉಕ್ರೇನ್ನ ವಾಯು ರಕ್ಷಣಾ ಸಾಮರ್ಥ್ಯವನ್ನು ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು. "ರಷ್ಯಾದ ರಾಜತಾಂತ್ರಿಕತೆಗೆ ಮತ್ತು ಪ್ರತ್ಯೇಕತೆಯಿಂದ ಹೊರಬರುವ ಪ್ರಯತ್ನಗಳಿಗೆ ಹೀಗೆ ಪ್ರತಿಕ್ರಿಯಿಸುತ್ತದೆ. ಮತ್ತು ಸಮಾಲೋಚನಾ ಪ್ರಕ್ರಿಯೆಯ ಜೊತೆಗೆ ಜೀವಗಳನ್ನು ರಕ್ಷಿಸುವವರಿಗೆ ನೀಡುವ ಬೆಂಬಲವು ಕಡಿಮೆ ಯಾಗದಿರುವುದು ಬಹಳ ಮುಖ್ಯ. ಯುರೋಪಿಯನ್ ದೇಶಗಳು ಈಗಾಗಲೇ ಅನುಮೋದಿಸಿರುವ ಪೇಟ್ರಿಯಾಟ್ ತಡೆಹಿಡಿಯುವ ಕ್ಷಿಪಣಿಗಳ ಪೂರೈಕೆಯನ್ನು ನಾವು ಮುಕ್ತಗೊಳಿಸಬೇಕಾಗಿದೆ. ಜೆಟ್ ಚಾಲಿತ 'ಶಾಹೇದ್'ಗಳಿಂದ ರಕ್ಷಿಸಿಕೊಳ್ಳಲು ಉಕ್ರೇನಿಯನ್ ಯುದ್ಧ ವಿಮಾನಗಳಿಗೆ ಬೆಂಬಲ ನೀಡುವುದನ್ನು ಮುಂದುವರಿಸಬೇಕು. ಅಂತಹ ಪ್ರತಿಯೊಂದು ರಕ್ಷಣಾ ಪ್ಯಾಕೇಜ್, ವಿಶೇಷವಾಗಿ ಚಳಿಗಾಲದ ಮುನ್ನ, ಜೀವಗಳನ್ನು ಉಳಿಸಲು ಸಹಾಯ ಮಾಡುತ್ತದೆ. ಈ ರೀತಿಯ ಬೆಂಬಲವನ್ನು ನೀಡುತ್ತಿರುವ ಎಲ್ಲಾ ಪಾಲುದಾರರಿಗೆ ನಾನು ಧನ್ಯವಾದಗಳು" ಎಂದು ಅವರು ಹೇಳಿದರು.

ಇಟಲಿಯಲ್ಲಿ ತೀವ್ರಗೊಂಡ ಪ್ರತಿಭಟನೆ: ಐತಿಹಾಸಿಕ ರೋಮ್‌ನ ಕೊಲೊಸಿಯಮ್ ಪ್ರವೇಶಿಸಿದ ಹೋರಾಟಗಾರರು

ರೋಮ್,ಅ.25: ಇಟಲಿ ಪ್ರಮುಖ ನಗರಗಳಲ್ಲಿ ವ್ಯಾಪಕ ಪ್ರದರ್ಶನಗಳನ್ನು ಕಂಡಿತು, ಪ್ರತಿಭಟನಾಕಾರರು ರೋಮ್‌ನ ಐತಿಹಾಸಿಕ ಸ್ಮಾರಕ ಕೊಲೊಸಿಯಮ್‌ಗೆ ಪ್ರವೇಶಿಸಿದರು. ಏರುತ್ತಿರುವ ಜೀವನ ವೆಚ್ಚ, ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ನೀತಿಗಳು ಮತ್ತು ನಡೆಯುತ್ತಿರುವ ಸಂಘರ್ಷಗಳ ಬಗ್ಗೆ ದೂರು ನೀಡಲು ಸಾವಿರಾರು ಜನರು ಸೇರಿದ್ದರಿಂದ ದೇಶಾದ್ಯಂತ ಒಂಬತ್ತು ಜನರನ್ನು ಬಂಧಿಸಲಾಯಿತು. ರೋಮ್ನಲ್ಲಿ ನಡೆದ ದೊಡ್ಡ ಮೆರವಣಿಗೆಯಿಂದ ಒಂದು ಸಣ್ಣ ಗುಂಪು ಬೇರೆಡೆಗೆ ತಿರುಗಿ, ಫ್ಲೇವಿಯನ್ ಆಂಫಿಥಿಯೇಟರ್ಗೆ ದಾರಿ ಮಾಡಿಕೊಟ್ಟಿತು, ಭದ್ರತೆ ಅವರನ್ನು ಹೊರಗೆ ಕರೆದೊಯ್ಯುವ ಮೊದಲು ಘೋಷಣೆಗಳನ್ನು ಕೂಗಿತು. ಪ್ರದರ್ಶನಗಳು ಹೆಚ್ಚಾಗಿ ಶಾಂತಿಯುತವಾಗಿದ್ದವು, ಗುಂಪುಗಳು ಫ್ಲಾರೆನ್ಸ್, ಟುರಿನ್, ಮಿಲನ್ ಮತ್ತು ರೋಮ್ನಲ್ಲಿರುವ ನಗರ ಕೇಂದ್ರಗಳನ್ನು ತಲುಪಲು ಪ್ರಯತ್ನಿಸುತ್ತಿದ್ದವು, ಆದರೆ ಆಗಾಗ್ಗೆ ಭದ್ರತಾ ಪಡೆಗಳು ಭೇಟಿಯಾದವು. ಪ್ರಮುಖ ಘರ್ಷಣೆಗಳನ್ನು ತಪ್ಪಿಸಿದರೂ, ಉದ್ವಿಗ್ನತೆಯ ಕ್ಷಣಗಳು ಎದ್ದವು. ರೋಮ್ನಲ್ಲಿ, ಒಬ್ಬ ಯುವ ಪ್ರತಿಭಟನಾಕಾರ ಪೊಲೀಸ್ ನೀರಿನ ಫಿರಂಗಿ ಟ್ರಕ್ ಅನ್ನು ಎದುರಿಸಿದನು, ಆದರೆ ಫ್ಲಾರೆನ್ಸ್ನಲ್ಲಿ, ಸಾಂಟಾ ಟ್ರಿನಿಟಾ ಸೇತುವೆಯ ಬಳಿ ಜನಸಮೂಹವನ್ನು ಹಿಂದಕ್ಕೆ ತಳ್ಳಲು ಪೊಲೀಸರು ಲಾಠಿಗಳನ್ನು ಬಳಸಿದರು. ಪ್ರತಿಭಟನಾಕಾರರು ವಸ್ತುಗಳನ್ನು ಎಸೆದ ನಂತರ ಬೊಲೊಗ್ನಾದಲ್ಲಿ ಅಶ್ರುವಾಯು ಮತ್ತು ನೀರಿನ ಫಿರಂಗಿಗಳನ್ನು ನಿಯೋಜಿಸಲಾಯಿತು, ಇದು ಒಬ್ಬರನ್ನು ಆಸ್ಪತ್ರೆಗೆ ದಾಖಲಿಸಿತು. "ಹಿಂಸಾತ್ಮಕ ವ್ಯಕ್ತಿಗಳು" ಕಾರ್ಯಕ್ರಮಗಳನ್ನು ಅಡ್ಡಿಪಡಿಸಲು ಪ್ರಯತ್ನಿಸಿದರೂ, ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಲು ಮತ್ತು ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ರಕ್ಷಿಸಲು ಕಾನೂನು ಜಾರಿ ಸಂಸ್ಥೆಗಳನ್ನು ಪ್ರಧಾನಿ ಮೆಲೋನಿ ಶ್ಲಾಘಿಸಿದರು.

ನಾಗರಿಕ ಸು